# GAZETTED PROBATIONERS (PRELIMS) GROUP 'A' AND 'B' POSTS COMPETITIVE EXAMINATION - 2020

## PAPER – I

**ಗರಿಷ್ಠ ಅಂಕಗಳು: 200** | **ಸಮಯ: 120 ನಿ.**

---

**1. ಪಟ್ಟಿ–1 ಮತ್ತು ಪಟ್ಟಿ–2 ಗಳನ್ನು ಹೊಂದಿಸಿ:**

| | ಪಟ್ಟಿ–1 | | ಪಟ್ಟಿ–2 |
|---|---|---|---|
| (a) | ಸ್ಟಾಂಪ್ ಸುಂಕಗಳು ಮತ್ತು ವೈದ್ಯಕೀಯ ತೆರಿಗೆ | 1) | ಕೇಂದ್ರ ಸರ್ಕಾರದಿಂದ ವಿಧಿಸಲಾದ ತೆರಿಗೆ ಆದರೆ ರಾಜ್ಯ ಸರ್ಕಾರದಿಂದ ಸಂಗ್ರಹಿಸಿ ವೆಚ್ಚ ಮಾಡುವುದು |
| (b) | ಕೃಷಿ ಭೂಮಿಯನ್ನು ಹೊರತುಪಡಿಸಿ ಉಳಿದ ಆಸ್ತಿಯ ಮೇಲಿನ ಉತ್ತರಾಧಿಕಾರತ್ವದ ಮೇಲಣ ತೆರಿಗೆ | 2) | ಕೇಂದ್ರ ಸರ್ಕಾರದಿಂದ ವಿಧಿಸಲಾದ ಮತ್ತು ಸಂಗ್ರಹಿಸಲಾದ ತೆರಿಗೆಗಳು ಆದರೆ ರಾಜ್ಯಗಳಿಗೆ ಮಾಡಲಾದ ತೆರಿಗೆಗಳು |
| (c) | ಕಾರ್ಪೋರೇಷನ್ ತೆರಿಗೆ ಮತ್ತು ಕೃಷಿ ಮೇಲಿನ ತೆರಿಗೆ ಇವುಗಳನ್ನು ಹೊರತುಪಡಿಸಿ ಇತರೆ ಆದಾಯದ ಮೇಲಿನ ತೆರಿಗೆ | 3) | ಕೇಂದ್ರ ಸರ್ಕಾರದಿಂದ ವಿಧಿಸಲಾದ ಮತ್ತು ಸಂಗ್ರಹಿಸಲಾದ ತೆರಿಗೆಗಳು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಹಂಚಿಕೆ ಮಾಡಿರುವುದು. |
| (d) | ವೈದ್ಯಕೀಯ ಮತ್ತು ಶೌಚಾಲಯ ಸಿದ್ಧ ಪಡಿಸುವುಕೆಗಳನ್ನು ಹೊರತುಪಡಿಸಿ ಇನ್ನಿತರ ಬಾಬ್ತುಗಳ ಮೇಲಿನ ಉತ್ಪಾದನಾ ತೆರಿಗೆ (Excise Duty) | 4) | ಕೇಂದ್ರ ಸರ್ಕಾರದಿಂದ ವಿಧಿಸಲಾದ ಮತ್ತು ಸಂಗ್ರಹಿಸಲ್ಪಟ್ಟ ತೆರಿಗೆಗಳು ಆದರೆ ಅವುಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೆ ಮಾಡಬಹುದಾದ ತೆರಿಗೆಗಳು |

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

| | A | B | C | D |
|---|---|---|---|---|
| (a) | 1 | 2 | 3 | 4 |
| (b) | 1 | 3 | 4 | 2 |
| (c) | 2 | 1 | 3 | 4 |
| (d) | 1 | 4 | 3 | 2 |

**2. ಯಾವ ರಾಜ್ಯ/ ಕೇಂದ್ರಾಡಳಿತ ಪ್ರದೇಶವು ವಿದ್ಯಾರ್ಥಿಗಳಿಗಾಗಿ ಅಂಬೇಡ್ಕರ್ ಬೋಧನೆಗಳ ಕುರಿತು ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿದೆ?**

(a) ಮಹಾರಾಷ್ಟ್ರ
(b) ಒರಿಸ್ಸಾ
(c) ಗೋವಾ
(d) ದೆಹಲಿ

**3. ಕೇಮ್ ಟೆರ್ರೇಸಸ್ ______ ನಿಕ್ಷೇಪ / ಸಂಚಯನದಿಂದಾಗುತ್ತದೆ.**

(a) ನಿಜ ಹಿಮನದಿ
(b) ಆಲ್ಫೈನ್ ಹಿಮನದಿ
(c) ಹಿಮನದಿ ಸೆಳೆತದಿಂದ
(d) ಕಣಿವೆ ಹಿಮನದಿ

**4. ಈ ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಯು/ ಗಳು ನಯನಾರ್‌ಗಳಿಗೆ ಸಂಬಂಧಿಸಿದಂತೆ ಸರಿಯಾಗಿವೆ?**

(a) ಅವರು ಸಂಗಮ ಕವಿಗಳಾಗಿದ್ದರು
(b) ಅವರು ಶೈವ ಸಂತರಾಗಿದ್ದರು
(c) ಅವರು ಭಕ್ತಿ ಕಾವ್ಯ ರಚಿಸಿದರು.
(d) ಪುರಾತನರು ಎಂದು ಕರೆಯಲ್ಪಡುವ, ಅವರು 64 ಸಂಖ್ಯೆಯಲ್ಲಿದ್ದರು.

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮಾತ್ರ
(b) ಎ ಮತ್ತು ಸಿ ಮಾತ್ರ
(c) ಬಿ, ಸಿ ಮತ್ತು ಡಿ
(d) ಬಿ ಮತ್ತು ಸಿ ಮಾತ್ರ

**5. ಅಮೆರಿಕಾದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನಕ್ಕೆ (ರಾ.ವಿ.ಪ್ರ) ಈ ಕೆಳಗಿನವರಲ್ಲಿ ಯಾರು ಇತ್ತೀಚೆಗೆ ನಿರ್ದೇಶಕರಾಗಿ ನೇಮಕವಾಗಿದ್ದಾರೆ?**

(a) ರಾಹುಲ್ ಸಚ್‌ದೇವ
(b) ಪಂಕಜ್ ಅಗ್ನಿಹೋತ್ರಿ
(c) ಸೇತುರಾಮನ್ ಪಂಚನಾಥನ್
(d) ಪ್ರಮೋದ್ ಮಿಸ್ತ್ರಿ

**6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

**a.** **ಕಾರ್ಪೋರೇಷನ್ ತೆರಿಗೆಯನ್ನು ನೋಂದಾಯಿತ ಮತ್ತು ನೋಂದಾಯಿಸದ ಎರಡೂ ಕಂಪನಿಗಳು ಮತ್ತು ನಿಗಮಗಳ (ಕಾರ್ಪೋರೇಷನ್) ಆದಾಯದ ಮೇಲೆ ವಿಧಿಸಲಾಗುತ್ತದೆ.**

**b.** **ಕಾರ್ಪೋರೇಷನ್ ತೆರಿಗೆಯನ್ನು ವ್ಯಕ್ತಿಗಳು ಮತ್ತು ಹಿಂದೂ ಅವಿಭಕ್ತ ಕುಟುಂಬಗಳ ಆದಾಯದ ಮೇಲೆ ವಿಧಿಸಲಾಗುತ್ತದೆ.**

**c.** **ಕಾರ್ಪೋರೇಷನ್ ತೆರಿಗೆಯನ್ನು ಕೇವಲ ನೊಂದಾಯಿತ ಕಂಪನಿಗಳು ಮತ್ತು ನಿಗಮಗಳ ಆದಾಯದ ಮೇಲೆ ಮಾತ್ರವೇ ವಿಧಿಸಲಾಗುತ್ತದೆ.**

**ಈ ಪೈಕಿ ಯಾವ ಹೇಳಿಕೆಯು/ ಗಳು ಸರಿ?**
**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮತ್ತು ಬಿ ಗಳು ಸರಿ
(b) ಸಿ ಮಾತ್ರ ಸರಿ
(c) ಬಿ ಮಾತ್ರ ಸರಿ
(d) ಮೇಲಿನ ಎಲ್ಲವೂ ಸರಿ.

**7. ಇಥಿಯೋಪಿಯ ದೇಶವು ಇತ್ತೀಚೆಗೆ ಉಡಾವಣೆ ಮಾಡಿದ ಪ್ರಥಮ ಉಪಗ್ರಹದ ಹೆಸರು.**

(a) ETRSS-1
(b) ETISAT-1
(c) ETSARS-1
(d) ETHIOS-1

**8.** **ನದಿ, ಮಂಜುಗಡ್ಡೆ ಅಥವಾ ಭೂಮಿಯ ಮೇಲ್ಭಾಗದಲ್ಲಿ ಘನೀಕರಿಸುವ / ಹೆಪ್ಪುಗಟ್ಟಿದ ನೀರಿನ ಪದರವನ್ನು ________ ಎಂದು ಕರೆಯಲಾಗುತ್ತದೆ.**

(a) ನಾಲೆಡ್ಸ್

(b) ಸರ್ಕ್

(c) ಸ್ನೋ ಕ್ಯಾಪ್

(d) ಸ್ನೋ ಲೈನ್

**9.** **ಭಾರತೀಯ ನಾಣ್ಯಶಾಸ್ತ್ರ ಇತಿಹಾಸದಲ್ಲಿ, ಪಂಚ್ ಗುರುತಿನ ನಾಣ್ಯಗಳಿಗೆ (ಪಂಚ್ ಮಾರ್ಕ್ಡ್ ಕಾಯಿನ್ಸ್ PMC) ವಿಶಿಷ್ಟ ಸ್ಥಾನವಿದೆ. ಇದಕ್ಕೆ ಅನ್ವಯಿಸುವಂತೆ ಕೆಳಗಿನ ಯಾವ ಹೇಳಿಕೆಗಳು ಸತ್ಯ.**

**a.** **ಅವು ಭಾರತದ ಅತ್ಯಂತ ಪ್ರಾಚೀನ ನಾಣ್ಯಗಳು.**

**b.** **ಅವು ದಕ್ಷಿಣ ಭಾರತದಲ್ಲಿ ಚಲಾವಣೆಯಲ್ಲಿ ಇರಲಿಲ್ಲ.**

**c.** **ನಾವು ಈ ನಾಣ್ಯಗಳ ಒಂದು ಅಥವಾ ಎರಡೂ ಮಗ್ಗಲುಗಳಲ್ಲೂ ಚಿನ್ಹೆಗಳನ್ನು ಗುರುತಿಸಬಹುದು.**

**d.** **ಈ ನಾಣ್ಯಗಳು ಬೆಳ್ಳಿಯಲ್ಲಿ ಮಾತ್ರ ದೊರೆಯುತ್ತವೆ.**

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:**

(a) ಎ ಮತ್ತು ಡಿ ಮಾತ್ರ

(b) ಎ ಮತ್ತು ಸಿ ಮಾತ್ರ

(c) ಎ, ಬಿ, ಸಿ ಮತ್ತು ಡಿ

(d) ಎ, ಸಿ ಮತ್ತು ಡಿ.

**10.** **ಗಾಲಪಗೋಸ್ ದ್ವೀಪಗಳಲ್ಲಿ ಯಾವ ದೇಶವು ಇತ್ತೀಚೆಗೆ ತುರ್ತುಪರಿಸ್ಥಿತಿಯನ್ನು ಘೋಷಿಸಿದೆ?**

(a) ಫಿನ್‌ಲ್ಯಾಂಡ್

(b) ಸ್ವೀಡನ್

(c) ಬಹಾಮಾಸ್

(d) ಈಕ್ವೆಡಾರ್

**11.** **ನಿರ್ಭಯಾ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಗಳು ಭಾರತದ ರಾಷ್ಟ್ರಪತಿಯವರಿಗೆ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯನ್ನು, ರಾಷ್ಟ್ರಪತಿಯವರು "ಶಿಕ್ಷೆ ಎಂದರೆ ಮರಣದಂಡನೆ ಶಿಕ್ಷೆ" ಎಂಬ ಸಂವಿಧಾನಾತ್ಮಕ ಉಪಬಂಧವನ್ನು ಉಪಯೋಗಿಸಿ ಸಂವಿಧಾನದ ಯಾವ ಅನುಚ್ಛೇದದ ಅನುಸಾರವಾಗಿ ತಿರಸ್ಕರಿಸಿದರು?**

(a) ಅನುಚ್ಛೇದ 70, ಭಾಗ V

(b) ಅನುಚ್ಛೇದ 71, ಭಾಗ V

(c) ಅನುಚ್ಛೇದ 72, ಭಾಗ V

(d) ಅನುಚ್ಛೇದ 74, ಭಾಗ V

**12.** **ಕೆಲಸ ಮಾಡಲು ಸಮರ್ಥವಾಗಿರುವ ಮತ್ತು ಬಯಸುವ ಎಲ್ಲರಿಗೂ ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುವಾಗ ಉತ್ಪಾದಕ ಸಾಮರ್ಥ್ಯದ ಅಸಮರ್ಪಕತೆಯೊಂದಿಗೆ ಸಂಬಂಧವುಳ್ಳ ನಿರುದ್ಯೋಗವು ________**

(a) ಘರ್ಷಣಾತ್ಮಕ ನಿರುದ್ಯೋಗ

(b) ಚಕ್ರೀಯ/ ಆವರ್ತಕ ನಿರುದ್ಯೋಗ

(c) ರಚನಾತ್ಮಕ ನಿರುದ್ಯೋಗ

(d) ಮುಕ್ತ ನಿರುದ್ಯೋಗ

**13.** **ಭಾರತೀಯ ಸಂವಿಧಾನವನ್ನು ಅರೆ ಒಕ್ಕೂಟ ಎಂದು ವರ್ಣಿಸಿದವರು ಯಾರು?**

(a) ಜೆನಿಂಗ್ಸ್

(b) ಕೆ.ಸಿ. ವೀಯರ್

(c) ಮಾರಿಸ್ ಜೋನ್ಸ್

(d) ಡಾ. ಬಿ. ಆರ್. ಅಂಬೇಡ್ಕರ್

**14.** **2020 ನೇ ಹವಾಮಾನ ಅಪಾಯ ಸೂಚ್ಯಂಕದಲ್ಲಿ ಭಾರತವು ______ ಸ್ಥಾನದಲ್ಲಿದೆ.**

(a) 14 ನೇ

(b) 11 ನೇ

(c) 9 ನೇ

(d) 5 ನೇ

**15.** **ಜೆಲಿನ್ಸ್‌ಕಿರವರಿಂದ ಮುಂದಿರಿಸಲ್ಪಟ್ಟ ವಲಸೆ ಸಂಕ್ರಮಣ ಸಿದ್ಧಾಂತವು (ದಿ ಮೈಗ್ರೇಷನ್ ಟ್ರಾನ್ಸಿಷನ್ ಥಿಯರಿ) _______ ಆಧಾರದ ಮೇಲಿದೆ.**

(a) ಜನಸಂಖ್ಯಾ ಶಾಸ್ತ್ರದ ಸಂಕ್ರಮಣ ಮಾದರಿ (ಡೆಮೊಗ್ರಾಫಿಕ್ ಟ್ರಾನ್ಸಿಷನ್ ಮಾಡೆಲ್)

(b) ವೆಬರ್ಸ್‌ನ ಅತ್ಯಲ್ಪ ಬೆಲೆ ಸಿದ್ಧಾಂತ (ವೆಬರ್ಸ್‌ನ ಲೀಸ್ಟ್ ಕಾಸ್ಟ್ ಥಿಯರಿ)

(c) ರೋಸ್ಟೋವ್‌ನ ಅಭಿವೃದ್ಧಿ ಸಿದ್ಧಾಂತ (ರೋಸ್ಟೋವ್‌ನ ಡೆವಲಪ್‌ಮೆಂಟ್ ಥಿಯರಿ)

(d) ಮ್ಯಾಕಿಂಡರ್‌ನ ಹಾರ್ಟ್‌ಲ್ಯಾಂಡ್ ಥಿಯರಿ

**16.** **ಹಿಂದೂ ಪ್ರತಿಮಾ ಶಾಸ್ತ್ರದ ಪ್ರಕಾರ "ಚತುರ್‌ವಿಂಶತಿ ಮೂರ್ತಿ" ಎಂಬ ಪದವು ಈ ಕೆಳಗಿನ ಯಾವ ಹೇಳಿಕೆಯನ್ನು ಸೂಚಿಸುತ್ತದೆ.**

(a) ಕೃಷ್ಣಲೀಲೆಗೆ ಸಂಬಂಧಿಸಿದ ಕಥೆಗಳನ್ನು ತೋರಿಸುವ ಶಿಲ್ಪ ದೃಶ್ಯಾವಳಿಗಳು

(b) ಅಸುರ ಸಂಹಾರ ಮಾಡುತ್ತಿರುವ ದೇವತೆಗಳ ಶಿಲಾಕೃತಿಗಳು

(c) ಶಿವನ ರೌದ್ರಾವತಾರ ಪ್ರದರ್ಶಿಸುವ, ಸಂಹಾರ ಮೂರ್ತಿರೂಪದ ಶಿವ

(d) ವಿಷ್ಣುವಿನ ನಾಲ್ಕು ಹಸ್ತಗಳಲ್ಲಿ ಇರುವ ಲಾಂಛನಗಳ ಆಧಾರದ ಮೇಲೆ ವಿಷ್ಣುವಿನ ರೂಪಗಳನ್ನು ಗುರುತಿಸುವುದು.

**17.** **ಭಾರತೀಯ ನೌಕಾಪಡೆ ನಿಶ್ಚಿಗೊಳಿಸಿದ–ವಿಂಗ್ ಡಾರ್ನಿಯರ್ ಕಣ್ಗಾವಲು ವಾಯುನೌಕೆಯನ್ನು ಹಾರಿಸಲು ಕೊಚ್ಚಿಯಲ್ಲಿನ ನೌಕಾ ಕಾರ್ಯಾಚರಣೆಗಳಿಗೆ ಇತ್ತೀಚೆಗೆ ಸೇರಿದ ಭಾರತೀಯ ನೌಕಾ ದಳದ ಪ್ರಥಮ ಮಹಿಳಾ ಪೈಲಟ್ ________**

(a) ಬಿಹಾರದಿಂದ ಸಬ್‌ಲೆಫ್ಟಿನೆಂಟ್ ಶಿವಾಂಗಿ ಸ್ವರೂಪ್

(b) ಮಹಾರಾಷ್ಟ್ರದಿಂದ ವಿಂಗ್ ಕಮಾಂಡರ್ ತೃಪ್ತಿ ಭಟ್ನಾಗರ್

(c) ಕರ್ನಾಟಕದಿಂದ ಲೆಫ್ಟಿನೆಂಟ್ ಪೂರ್ವಿಕಾ ನಾಯಕ್

(d) ಉತ್ತರಪ್ರದೇಶದಿಂದ ಏವಿಯೇಟರ್ ಸರೋಜಾ ದೇಸಾಯಿ

**18. ಜಿ.ಎನ್.ಪಿ.ಯು ಅಳೆಯುವುದು ___________**

(a) ಒಂದು ದೇಶದ ನಿವಾಸಿಗಳು ಕೋರಿರುವ ಒಟ್ಟು ದೇಶಿಯ ಮತ್ತು ವಿದೇಶಿಯ ಉತ್ಪನ್ನ

(b) ಒಂದು ದೇಶದ ನಿವಾಸಿಗಳು ಕೋರಿರುವ ಒಟ್ಟು ದೇಶಿಯ ಉತ್ಪನ್ನ

(c) ಒಂದು ದೇಶದ ನಿವಾಸಿಗಳು ಕೋರಿರುವ ಒಟ್ಟು ವಿದೇಶಿಯ ಉತ್ಪನ್ನ

(d) ಮೇಲಿನ ಯಾವುದೂ ಅಲ್ಲ.

**19. ಭಾರತದ ಅಟಾರ್ನಿ ಜನರಲ್‌ರನ್ನು ಯಾರು ನೇಮಿಸುತ್ತಾರೆ?**

(a) ಪ್ರಧಾನ ಮಂತ್ರಿ

(b) ಲೋಕಸಭೆ

(c) ರಾಷ್ಟ್ರಪತಿ

(d) ಮೇಲಿನ ಯಾವುದೂ ಅಲ್ಲ.

**20. ವಿದೇಶಾಂಗ ವ್ಯವಹಾರಗಳ ಸಚಿವಾಲಯವು 2019 ರಲ್ಲಿ ವಲಸೆ ಮಸೂದೆಯನ್ನು ಪ್ರಸ್ತಾಪಿಸಿದ್ದು ಇದು ಪ್ರಚಲಿತದಲ್ಲಿರುವ ಈ ಕೆಳಗಿನ ಯಾವ ಕಾಯ್ದೆಯನ್ನು ಬದಲಿಸುವುದು.**

(a) ವಲಸೆ ಕಾಯ್ದೆ, 1963

(b) ವಲಸೆ ಕಾಯ್ದೆ, 1973

(c) ವಲಸೆ ಕಾಯ್ದೆ, 1983

(d) ವಲಸೆ ಕಾಯ್ದೆ, 1981

**21. ಈ ಕೆಳಗಿನ ಪಟ್ಟಿಯಲ್ಲಿ ಯಾವುದು ಹಲವು ವಿರಳ ಖನಿಜಗಳ ಹೇರಳ ನಿಕ್ಷೇಪಗಳಿಗೆ ನಿರ್ದಿಷ್ಟವಾಗಿ ಖ್ಯಾತವಾಗಿದೆ?**

(a) ದಕ್ಷಿಣ ಆಫ್ರಿಕಾ

(b) ನ್ಯೂಜಿಲ್ಯಾಂಡ್

(c) ಮೆಕ್ಸಿಕೋ

(d) ದಕ್ಷಿಣ ಅಮೆರಿಕಾ

**22. ಈ ಕೆಳಗಿನವುಗಳಲ್ಲಿ ಯಾವುವು ಇಂಡೋಗ್ರೀಕ್ ಮತ್ತು ಕುಶಾನ ದೊರೆಗಳು ಹೊರಡಿಸಿದ ನಾಣ್ಯಗಳಲ್ಲಿ ಸಾಮಾನ್ಯವಾದ ಅಂಶಗಳಾಗಿವೆ?**

**a.** ಗ್ರೀಕ್ ಮತ್ತು ಭಾರತೀಯ ದೇವತೆಗಳ ಪ್ರತಿಮೆಗಳು

**b.** ದ್ವೈ–ಭಾಷಿಕ ನಾಣ್ಯಗಳು

**c.** ಚಿನ್ನ ಮತ್ತು ತಾಮ್ರದ ಬಳಕೆ

**d.** ರಾಜರ ಚಿತ್ರಗಳು/ ರಾಜರ ಪ್ರತಿಮಾ ಶಿಲ್ಪಗಳು

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:**

(a) ಡಿ ಮಾತ್ರ

(b) ಬಿ ಮತ್ತು ಡಿ ಮಾತ್ರ

(c) ಎ, ಬಿ ಮತ್ತು ಡಿ ಮಾತ್ರ

(d) ಎ, ಸಿ ಮತ್ತು ಡಿ ಮಾತ್ರ

**23. ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವನ್ನು ಸ್ಥಾಪಿಸುವುದಾಗಿ ಇತ್ತೀಚೆಗೆ ಯಾವ ಸಚಿವಾಲಯವು ಘೋಷಿಸಿತು?**

(a) ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ

(b) ಹಣಕಾಸು ಸಚಿವಾಲಯ

(c) ಗ್ರಾಹಕ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವಾಲಯ

(d) ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯ

**24. ಕೆಳಕಂಡವುಗಳಲ್ಲಿ ಯಾವುದು ತೆರಿಗೆಯೇತರ ಆದಾಯವಲ್ಲ?**

(a) ಬಡ್ಡಿ ತೆರಿಗೆ

(b) ಲಾಭಾಂಶಗಳು (ಡಿವಿಡೆಂಡ್‌ಗಳು) ಮತ್ತು ಲಾಭಗಳು

(c) ಬಾಹ್ಯ ಅನುದಾನಗಳು

(d) ಬಡ್ಡಿ ಸ್ವೀಕೃತಿಗಳು/ ಗಳಿಕೆಗಳು

**25. ಉದಾರವಾದಿ ರಾಜಕೀಯ ಪಕ್ಷಗಳ ಗುರಿ _____ ಆಗಿರುತ್ತದೆ.**

(a) ಅಸ್ತಿತ್ವದಲ್ಲಿರುವ ಸಂಸ್ಥೆಗಳ ಸುಧಾರಣೆ

(b) ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಕಿತ್ತೆಸೆದು ಹೊಸ ವ್ಯವಸ್ಥೆಯನ್ನು ಸ್ಥಾಪಿಸುವುದು.

(c) ಯಥಾಸ್ಥಿತಿಯಲ್ಲಿ ನಂಬಿಕೆಯನ್ನಿಡುವುದು

(d) ಹಳೆಯ ಸಮಾಜೋ– ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳಿಗೆ ಜೋತು ಬೀಳುವುದು.

**26. ಜೈದ್ (Zaid) ಋತುಮಾನದಲ್ಲಿ ಬೆಳೆಯುವ ಒಂದು ಬೆಳೆ ____**

(a) ಕಲ್ಲಂಗಡಿ

(b) ಸೋಯಾ ಅವರೆ

(c) ಜೋಳ

(d) ಸೆಣಬು

**27. ಅಲಹಾಬಾದ್ ಸ್ತಂಭ ಶಾಸನವು ಸಮುದ್ರಗುಪ್ತನ ದಿಗ್ವಿಜಯಗಳಿಗೆ ಹೆಸರಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?**

**a.** ಅವನು ಕಾಮರೂಪ, ಸಮತಾಟ ಮುಂತಾದ ಗಡಿರಾಜರುಗಳು ವಿನಯಪೂರ್ವಕವಾಗಿ ಗೌರವ ಸಲ್ಲಿಸಿ, ಕಪ್ಪಕಾಣಿಕೆಗಳನ್ನು ಅವನಿಗೆ ನೀಡುವಂತೆ ಮಾಡಿದನು.

**b.** ಶಕರನ್ನು ಮತ್ತು ಮರುಂಡರನ್ನು ಯುದ್ಧದಿಂದ ಹೊರಹಾಕಿದನು.

**c.** ಪಾಲಕ್ಕ, ಕೊಟ್ಟೂರ ಹಾಗೂ ಅವಮುಕ್ತದ ರಾಜರನ್ನು ಸೋಲಿಸಿ ಸೆರೆಹಿಡಿದು ನಂತರ ಬಿಡುಗಡೆ ಮಾಡಿದನು.

**d.** ಯೌಧೇಯ, ಮಾದ್ರಕ ಮತ್ತು ಮಾಳ್ವರವರನ್ನು ನಿರ್ಮೂಲನೆ ಮಾಡಿದನು.

**ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:**

(a) ಎ ಮತ್ತು ಸಿ ಮಾತ್ರ

(b) ಬಿ ಮತ್ತು ಡಿ ಮಾತ್ರ

(c) ಎ, ಬಿ ಮತ್ತು ಡಿ ಮಾತ್ರ

(d) ಬಿ, ಸಿ ಮತ್ತು ಡಿ ಮಾತ್ರ

**28. ಇತ್ತೀಚೆಗೆ ಉದ್ಘಾಟಿತವಾದ ದಿಫ್ಪೋ ಸೇತುವೆಯು ಕೆಳಗಿನ ಯಾವ ಎರಡು ಕಣಿವೆಗಳನ್ನು ಸಂಪರ್ಕಿಸುತ್ತದೆ?**

(a) ದಿಬಾಂಗ್ ಕಣಿವೆ ಮತ್ತು ಲೋಹಿತ್ ಕಣಿವೆ

(b) ಕಾಶ್ಮೀರ ಕಣಿವೆ ಮತ್ತು ಕುಲು ಕಣಿವೆ

(c) ಬರಾಕ್ ಕಣಿವೆ ಮತ್ತು ಆಸ್ಸಾಂ ಕಣಿವೆ

(d) ಬಾಸ್ಪಾ ಕಣಿವೆ ಮತ್ತು ಚಂಪಾ ಕಣಿವೆ

**29. ಪ್ರಸಕ್ತ ಶಕದ (ಕ್ರಿಸ್ತ ಶಕ) ಪೂರ್ವ ಶತಾಬ್ಧಿಗಳ ಅವಧಿಯಲ್ಲಿ ಇಂಡೋ–ರೋಮನ್ ವ್ಯಾಪಾರವು, ಈ ಕೆಳಗಿನ ಯಾವ ಬಂದರುಗಳೊಂದಿಗೆ ಸಂಬಂಧಿಸಿತ್ತು?**

**ಎ) ಬರೂಚ್** **ಬಿ) ಅರಿಕಮೇಡು**

**ಸಿ) ಮುಜಿರಿಸ್** **ಡಿ) ತಮ್ರ್ಲುಕ್**

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ**

(a) ಎ ಮತ್ತು ಡಿ ಮಾತ್ರ
(b) ಬಿ ಮತ್ತು ಸಿ ಮಾತ್ರ
(c) ಎ, ಬಿ ಮತ್ತು ಸಿ ಮಾತ್ರ
(d) ಎ, ಬಿ, ಸಿ ಮತ್ತು ಡಿ

**30. ಸ್ವೀಡಿಷ್‌ನ ಗ್ರೇಟಾ ಥನ್‌ಬರ್ಗ್ ಎಂಬ ಯುವತಿಯು ಹವಾಮಾನ ಬದಲಾವಣೆ ವಿರುದ್ಧದ ಚಳುವಳಿಯನ್ನು ತೊಡಗಿದ್ದು, ಈ ಕೆಳಗಿನ ಯಾವ ಕಾರಣಗಳಿಗಾಗಿ 2019 ರ ಮಧ್ಯೆ ಸುದ್ದಿಯಲ್ಲಿದ್ದರು.**

(a) ರೈಟ್ ಲೈವ್ಲಿಹುಡ್ ಪ್ರಶಸ್ತಿ ಗಳಿಸಿದ್ದಕ್ಕಾಗಿ
(b) 2019ರ ನೊಬೆಲ್ ಶಾಂತಿ ಪ್ರಶಸ್ತಿ ಗಳಿಸಿದ್ದಕ್ಕಾಗಿ
(c) 2019ರ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಗಳಿಸಿದ್ದಕ್ಕಾಗಿ
(d) ಮೇಲಿನ ಯಾವುದೂ ಅಲ್ಲ.

**31. ಕರ್ನಾಟಕದ ಈ ಕೆಳಗಿನ ಯಾವ ಜಿಲ್ಲೆಯು ಈಶಾನ್ಯ ಸಂಕ್ರಮಣ ವಲಯದಲ್ಲಿ ಸ್ಥಿತವಾಗಿದೆ?**

(a) ಕಲಬುರಗಿ ಮತ್ತು ಯಾದಗಿರಿ
(b) ಬೀದರ್ ಮತ್ತು ಕಲಬುರಗಿ
(c) ಯಾದಗಿರಿ ಮತ್ತು ರಾಯಚೂರು
(d) ರಾಯಚೂರು ಮತ್ತು ಬೀದರ್

**32. ಇತ್ತೀಚೆಗೆ ಕೇಂದ್ರ ಸರ್ಕಾರವು ಸಿಂಡಿಕೇಟ್ ಬ್ಯಾಂಕ್‌ನ್ನು ಕೆನರಾ ಬ್ಯಾಂಕಿನೊಂದಿಗೆ ಮತ್ತು ಕಾರ್ಪೊರೇಷನ್ ಬ್ಯಾಂಕ್‌ನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸುವಿಕೆಯನ್ನು ಪ್ರಕಟಿಸಿತು. ಈ ಹಿನ್ನೆಲೆಯಲ್ಲಿ ಕೆಳಗಿನ ಯಾವ ಹೇಳಿಕೆ ಸರಿಯಾಗಿಲ್ಲ?**

(a) ಕಾರ್ಪೊರೇಷನ್ ಬ್ಯಾಂಕ್ ಉಡುಪಿಯಲ್ಲಿ ಸ್ಥಾಪಿತವಾಗಿತ್ತು.
(b) ಅಮ್ಮೆಂಬಳ ಸುಬ್ಬರಾವ್ ಪೈರವರ ನೇತೃತ್ವದಡಿ ಕೆನರಾ ಬ್ಯಾಂಕ್ ಸ್ಥಾಪನೆಯಾಯಿತು.
(c) ಎಲ್ಲಾ ನಾಲ್ಕು ಬ್ಯಾಂಕ್‌ಗಳು ಕರ್ನಾಟಕದಲ್ಲಿ ಸ್ಥಾಪನೆಯಾದವು.
(d) ಕಾರ್ಪೊರೇಷನ್ ಬ್ಯಾಂಕ್‌ನ ಸಂಸ್ಥಾಪಕ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ್ ಬಹದೂರ್

**33. ಮುಕ್ತ ಮಾರುಕಟ್ಟೆ ಕಾರ್ಯಾಚರಣೆಯು ಸಂಬಂಧಿಸಿದೆ.**

(a) ವಾಣಿಜ್ಯ ಬ್ಯಾಂಕುಗಳಿಂದ ಸರ್ಕಾರಿ ಬಾಂಡುಗಳ ಮಾರುವಿಕೆ ಅಥವಾ ಕೊಳ್ಳುವಿಕೆಯ ಆರ್.ಬಿ.ಐ. ನ ಕ್ರಿಯೆಗೆ
(b) ಸರ್ಕಾರಿ ಬಾಂಡುಗಳ ಮಾರುವಿಕೆ ಅಥವಾ ಕೊಳ್ಳುವಿಕೆಯ ಸೆಬಿಯ ಕ್ರಿಯೆಗೆ
(c) ಮುಕ್ತ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಕೊಳ್ಳುವಿಕೆ ಮತ್ತು ಮಾರುವಿಕೆಗೆ
(d) ಮೇಲಿನ ಯಾವುದೂ ಅಲ್ಲ.

**34. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು __________ ರಂದು ಸ್ಥಾಪಿಸಲಾಯಿತು.**

(a) ಮಾರ್ಚ್, 1952
(b) ಜೂನ್, 1952
(c) ಆಗಸ್ಟ್, 1952
(d) ಅಕ್ಟೋಬರ್, 1952

**35. ಇತ್ತೀಚಿಗೆ ಸುದ್ದಿಯಲ್ಲಿದ್ದ ಕೆಳಗಿನ ಸಮಿತಿಗಳು ಮತ್ತು ಅವುಗಳ ಆಜ್ಞೆಗಳನ್ನು ಪರಿಗಣಿಸಿ:**

| | ಸಮಿತಿ | ನಿರ್ಧಾರ (Mandate) |
|---|---|---|
| (a) | ಯು.ಕೆ. ಸಿನ್ಹಾ | ಸೆಬಿಯಲ್ಲಿ ಕಾಯ್ದಿರಿಸಿದ ಹೆಚ್ಚಿನ ಹಣವನ್ನು ಸರ್ಕಾರಕ್ಕೆ ವರ್ಗಾವಣೆ ಮಾಡುವುದು. |
| (b) | ನಂದನ್ ನಿಲೇಕಣಿ | ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವುದು |
| (c) | ಬಿಮಲ್ ಜಲನ್ | ಆರ್ಥಿಕ ಬಂಡವಾಳ ಚೌಕಟ್ಟು |

**ಮೇಲಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ? ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮತ್ತು ಬಿ ಮಾತ್ರ
(b) ಬಿ ಮತ್ತು ಸಿ ಮಾತ್ರ
(c) ಎ ಮತ್ತು ಸಿ ಮಾತ್ರ
(d) ಎ, ಬಿ ಮತ್ತು ಸಿ

**36. ಈ ಕೆಳಗಿನವುಗಳಲ್ಲಿ ಯಾವುದು 2011 ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದೆ.**

(a) ಮೈಸೂರು
(b) ದಾವಣಗೆರೆ
(c) ಧಾರವಾಡ
(d) ದಕ್ಷಿಣ ಕನ್ನಡ

**37. ಕರ್ನಾಟಕದ ಸುಪ್ರಸಿದ್ಧ ಅಗ್ರಹಾರಗಳು __________**

(a) ನಾಗಾವಿ, ಲಕ್ಕುಂಡಿ, ಸಾಲೊಟಗಿ, ಹರಿಹರಪುರ
(b) ಹಂಪಿ, ಬೇಲೂರು, ಮೈಸೂರು, ಮಾಗಡಿ
(c) ಬದಾಮಿ, ಬಿಜಾಪೂರ, ನಳಂದ, ವಿಕ್ರಮಶಿಲಾ
(d) ಕಡಿಯೂರು, ಶ್ರವಣಬೆಳಗೊಳ, ವೆಂಗಿ, ಕಲ್ಯಾಣ

**38. 2020–21 ನೇ ಕೇಂದ್ರ ಮುಂಗಡ ಪತ್ರದಲ್ಲಿ ಆರೋಗ್ಯ ಸುರಕ್ಷಾ ವಲಯಕ್ಕೆ ನಿಗದಿ ಮಾಡಿರುವ ಹಣ.**

(a) ರೂ. 69,000 ಕೋಟಿಗಳು
(b) ರೂ. 79,000 ಕೋಟಿಗಳು
(c) ರೂ. 59,000 ಕೋಟಿಗಳು
(d) ರೂ. 89,000 ಕೋಟಿಗಳು

**39. ಈ ಕೆಳಗಿನ ಯಾವ ಜೋಡಿಯು ಸರಿಯಾಗಿ ಹೊಂದಾಣಿಕೆಯಾಗುವುದಿಲ್ಲ?**

| | **ಜಲಪಾತ** | – | **ನದಿ** |
|---|---|---|---|
| (a) | ಬುಧ–ಘಾಗ್ | – | ಮಹಾನದಿ |
| (b) | ಧುವಂಧರ್ | – | ನರ್ಮದಾ |
| (c) | ದೂದ್‌ಸಾಗರ್ | – | ಮಾಂಡೋವಿ |
| (d) | ಗೋಕಾಕ್ | – | ಘಟಪ್ರಭಾ |

**40. ಭದ್ರತೆ (ಸೆಕ್ಯೂರಿಟಿ) ಯನ್ನು ಹಲವಾರು ಬಾರಿ ಮಾರಬಲ್ಲ ಬಂಡವಾಳ ಮಾರುಕಟ್ಟೆಯು ________**

(a) ಪ್ರಾಥಮಿಕ ಮಾರುಕಟ್ಟೆ
(b) ದ್ವಿತೀಯಕ ಮಾರುಕಟ್ಟೆ
(c) ತೃತೀಯಕ ಮಾರುಕಟ್ಟೆ
(d) ಮೇಲಿನ ಎಲ್ಲವೂ

**41. ಭಾರತದ ಯಾವ ಜೀವಗೋಳ ಮೀಸಲು ಪ್ರದೇಶವು ಯುನೆಸ್ಕೋ ನಾಮಾಂಕಿತವಾದ ಜೀವಗೋಳ ಮೀಸಲು ಪ್ರದೇಶದ ವಿಶ್ವ ಜಾಲತಾಣದಲ್ಲಿ ಭಾರತದಿಂದ 11 ನೇ ಜೀವಗೋಳ ಮೀಸಲು ಪ್ರದೇಶವಾಗಿ ಸೇರ್ಪಡೆಯಾಗಿದೆ?**

(a) ಕಾಂಚನಜುಂಗಾ ಜೀವಗೋಳ ಮೀಸಲು ಪ್ರದೇಶ
(b) ನೀಲಗಿರಿ ಜೀವಗೊಳ ಮೀಸಲು ಪ್ರದೇಶ
(c) ನಿಕೋಬಾರ್ ಜೀವಗೋಳ ಮೀಸಲು ಪ್ರದೇಶ
(d) ನೊಕ್ರೆಕ್ ಜೀವಗೋಳ ಮೀಸಲು ಪ್ರದೇಶ

**42. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

(a) ಆಂತ್ರಸೈಟ್ ಗಡುಸಾದ ಕಲ್ಲಿದ್ದಲು.
(b) ಬಿಟುಮಿನಸ್ ಅನ್ನು ಲೋಹೋದ್ಧರಣಕ್ಕಾಗಿ ಬಳಸುವ ಅತ್ಯಂತ ಜನಪ್ರಿಯ ಕಲ್ಲಿದ್ದಲು
(c) ಬಿಟುಮಿನಸ್ ಅನ್ನು ಮೆದುಕಲ್ಲಿದ್ದಲು ಎಂತಲೂ ಕರೆಯಲಾಗುವುದು
(d) ಕೋಕ್‌ಅನ್ನು ಬಿಟುಮಿನಸ್‌ನಿಂದ ಸಿದ್ಧಪಡಿಸಲಾಗುವುದು.

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(1) ಎ, ಬಿ ಮತ್ತು ಸಿ ಗಳು ಸರಿಯಾಗಿವೆ
(2) ಎ, ಸಿ ಮತ್ತು ಡಿ ಗಳು ಸರಿಯಾಗಿವೆ
(3) ಬಿ, ಸಿ ಮತ್ತು ಡಿ ಗಳು ಸರಿಯಾಗಿವೆ
(4) ಎ, ಬಿ, ಸಿ ಮತ್ತು ಡಿ ಗಳು ಸರಿಯಾಗಿವೆ.

**43. 'ಸಿಂಧೂ ಕಣಿವೆ ನಗರಗಳು ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳಿಂದ ಚಿನ್ನವನ್ನು ಪಡೆಯುತ್ತಿದ್ದವು' ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದವರು?**

(a) ಎಸ್. ಆರ್. ರಾವ್
(b) ಎ. ಸುಂದರ
(c) ಡಿ.ಡಿ. ಕೊಸಾಂಬಿ
(d) ಬಿ. ಆರ್. ಗೋಪಾಲ್

**44. ಈ ಕೆಳಗಿನವುಗಳಲ್ಲಿ ಯಾವುದು ಭಾರತೀಯ ಸಂವಿಧಾನದ "ವಿನೂತನ ಲಕ್ಷಣ" ವೆಂದು ವಿವರಿಸಲ್ಪಟ್ಟಿದೆ?**

(a) ಮೂಲಭೂತ ಹಕ್ಕುಗಳು
(b) ರಾಜ್ಯನೀತಿ ನಿರ್ದೇಶಕ ತತ್ವಗಳು
(c) ಮೂಲಭೂತ ಕರ್ತವ್ಯಗಳು
(d) ಸಂವಿಧಾನದ ಪರಿಹಾರಾತ್ಮಕ ಹಕ್ಕು

**45. ಈ ಕೆಳಗಿನ ಹೇಳಿಕೆಗಳನ್ನು ವಿಶ್ವಸಂಸ್ಥೆ ಪ್ರಕಟಿಸಿದ 2019ರ ಮೇ, 7ರ ವರದಿ ಆಧರಿಸಿ ಪರಿಗಣಿಸಿ.**

**a.** **ಹವಾಮಾನ ಬದಲಾವಣೆ ಹಾಗೂ ಏರುತ್ತಿರುವ ಸಮುದ್ರ ಮಟ್ಟವು ಕಟ್ಟಕಡೆಯ ಪ್ರಪಂಚದ ಹುಲಿಗಳ ಅತಿ ದೊಡ್ಡ ಅಬೇದ್ಯ ನೆಲೆಯನು ಅಳಿಸಿ ಹಾಕಬಹುದು.**

**b.** **ಸುಂದರ್‌ಬನ್ಸ್‌ನ 10,000 ಚದರ ಕಿಲೋಮೀಟರ್‌ಗಳ ಜೌಗುಪ್ರದೇಶವು ಬಾಂಗ್ಲಾದೇಶ ಮತ್ತು ಭಾರತದಲ್ಲಿದ್ದು ವಿಶ್ವದ ಅತಿದೊಡ್ಡ ಮ್ಯಾಂಗ್ರೋವ್ ಕಾಡುಗಳ ನೆಲೆ ಆಗಿರುತ್ತದೆ ಮತ್ತು ಅದು ಬಂಗಾಳ ಹುಲಿಯು ಸೇರಿದಂತೆ ಅನೇಕ ನೂರು ಪ್ರಾಣಿ ಪ್ರಭೇದಗಳನ್ನು ಬೆಂಬಲಿಸುವ ಸಮೃದ್ಧ ಪರಿಸರ ವ್ಯವಸ್ಥೆ ಆಗಿದೆ.**

**c.** **5,00,000 ಭೂ ಪ್ರಭೇದಗಳಲ್ಲಿ ಬೆಕ್ಕು ಸಹ ಒಂದಾಗಿದ್ದು, ಅವುಗಳ ನೈಸರ್ಗಿಕ ಆವಾಸ ಸ್ಥಾನಗಳಿಗೆ ಬೆದರಿಕೆ ಇರುವುದರಿಂದ ಬದುಕುಳಿಯುವ ಪ್ರಶ್ನೆಯಿದೆ.**

**ಈ ಪೈಕಿ ಯಾವ ಹೇಳಿಕೆಯು/ಗಳು ಸರಿ? ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮಾತ್ರ
(b) ಎ ಮತ್ತು ಬಿ ಎರಡೂ
(c) ಎ ಮತ್ತು ಸಿ ಎರಡೂ
(d) ಈ ಮೇಲಿನ ಎಲ್ಲವೂ

**46. ಉದಾರೀಕೃತ ವಿನಿಮಯ ದರ ನಿರ್ವಹಣಾ ವ್ಯವಸ್ಥೆಯನ್ನು (ಎಲ್.ಇ.ಆರ್.ಎಮ್.ಎಸ್.) ______ ರಲ್ಲಿ ಸ್ಥಾಪಿಸಲಾಯಿತು.**

(a) ಎಪ್ರೀಲ್, 1991
(b) ಎಪ್ರೀಲ್, 1993
(c) ಮಾರ್ಚ್, 1992
(d) ಎಪ್ರೀಲ್, 1995

**47. ಗಂಗಾ ನದಿಯ ಜಲಾನಯನ, ಗಂಗೆ ಮತ್ತು ಅದರ ಉಪನದಿಗಳನ್ನೂ ಒಳಗೊಂಡಂತೆ ಮಾಲಿನ್ಯ ತಡೆಯುವಿಕೆ ಮತ್ತು ಪುನರುಜ್ಜೀವಿಕೆಗೊಳಿಸುವ ಮೇಲ್ವಿಚಾರಣೆಯ ಸಂಪೂರ್ಣ ಹೊಣೆಯನ್ನು ನಿರ್ವಹಿಸುವ ಉದ್ದೇಶಕ್ಕಾಗಿ ರಾಷ್ಟ್ರೀಯ ಗಂಗಾ ಮಂಡಲಿ ಅಥವಾ ಗಂಗಾ ನದಿಯ ಪುನರುಜ್ಜೀವನ, ಸಂರಕ್ಷಣೆ ಮತ್ತು ನಿರ್ವಹಣೆಯ ರಾಷ್ಟ್ರೀಯ ಮಂಡಲಿಯನ್ನು ಸ್ಥಾಪಿಸಲಾಯಿತು.**

**ಈ ಕೆಳಗಿನ ಪ್ರಶ್ನೆಗಳಿಗೆ ಸರಿಯುತ್ತರವನ್ನು ಆಯ್ಕೆ ಮಾಡಿ:**

**a.** **ರಾಷ್ಟ್ರೀಯ ಗಂಗಾ ಮಂಡಲಿಯು ಯಾವ ವರ್ಷ ರಚಿತವಾಯಿತು?**

**b.** **ರಾಷ್ಟ್ರೀಯ ಗಂಗಾ ಮಂಡಲಿಯಿಂದ ಯಾವ ನಿಕಾಯವು ಬದಲಾಯಿಸಲ್ಪಟ್ಟಿತ್ತು?**

**c.** **ಗಂಗಾ ನದಿಯ ಮೇಲಣ ಸಬಲೀಕರಣ ಕಾರ್ಯಪಡೆಯ (ETF) ಅಧ್ಯಕ್ಷರು ಯಾರು?**

(a) 2009 – ರಾಷ್ಟ್ರೀಯ ಗಂಗಾನದಿ ಜಲಾನಯನ ಕಾಯ್ದೆ (NGRBA) – ಗಂಗಾನದಿ ಜಲಾನಯನವನ್ನೊ ಗೊಳ್ಳುವ ರಾಜ್ಯಗಳ ಮುಖ್ಯ ಮಂತ್ರಿಗಳು
(b) 2013– ಗಂಗಾ ನದಿ ಯೋಜನೆ ಉನ್ನತ ಅಧಿಕಾರ ಸಮಿತಿ (GRPHPC) – ಪರಿಸರ, ಪ್ರವಾಸೋದ್ಯಮ ಮತ್ತು ವಾಯುಗುಣ ಬದಲಾವಣೆ, ಕೇಂದ್ರ ಸಚಿವರು
(c) 2016 – ರಾಷ್ಟ್ರೀಯ ಗಂಗಾ ನದಿ ಜಲಾನಯನ ಪ್ರಾಧಿಕಾರ (NGRBA)– ಜಲಶಕ್ತಿಯ ಕೇಂದ್ರ ಸಚಿವರು.
(d) 2018– ರಾಷ್ಟ್ರೀಯ ಗಂಗಾ ನದಿ ನಿಯೋಗ (NRGM)– ಪ್ರಧಾನಿ ಮಂತ್ರಿ

ICSDAD

**48. ಈ ಕೆಳಕಂಡ ವಿದ್ವಾಂಸರಲ್ಲಿ ಯಾರು ರಾಷ್ಟ್ರಕೂಟರನ್ನು ಕನ್ನಡದ ಮೂಲದವರೆಂದು ತಮ್ಮ ವಾದವನ್ನು ಮಂಡಿಸಿದ್ದಾರೆ?**

(a) ಡಾ. ಎ.ಎಸ್. ಅಲ್ಟೇಕರ್
(b) ಡಾ. ಫ್ಲೀಟ್
(c) ಡಾ. ಡಿ. ಆರ್. ಭಂಡಾರ್ಕರ್
(d) ಕೆ.ವಿ. ಸುಬ್ರಮಣ್ಯ ಅಯ್ಯರ್

**49. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

**a.** ವಯಸ್ಸು ಮತ್ತು ಲಿಂಗಾಧಾರಿತವಾಗಿ ಜನಸಂಖ್ಯಾ ರಚನೆಯು ವಿಶ್ಲೇಷಿಸಲ್ಪಟ್ಟಿದೆ.

**b.** ನಕ್ಷಾಶಾಸ್ತ್ರೀಯವಾಗಿ (ಕಾರ್ಟೊಗ್ರಾಫಿಕ್) ಜನಸಂಖ್ಯಾ ರಚನೆಯು ಜನಸಂಖ್ಯಾ ಪಿರಮಿಡ್‌ಗಳಿಂದ ಪ್ರತಿನಿಧಿಸಲ್ಪಟ್ಟಿದೆ.

**ಮೇಲಿನ ಹೇಳಿಕೆಗಳನ್ನು ಯುವುದು/ ವು ಸರಿ?**
**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾರ ಉತ್ತರವನ್ನಾರಿಸಿ:**

(a) ಎ ಮಾತ್ರ ಸರಿ
(b) ಬಿ ಮಾತ್ರ ಸರಿ
(c) ಎ ಮತ್ತು ಬಿ ಎರಡೂ ಸರಿ
(d) ಎ ಆಗಲೀ ಅಥವಾ ಬಿ ಆಗಲೀ ಅಲ್ಲ

**50. ಹೈದರಾಲಿಯ ವಿರುದ್ಧ ಹೋರಾಡಿದ ಚಿತ್ರದುರ್ಗದ ನಾಯಕ ಯಾರು?**

(a) ಮೊದಲನೇ ಮದಕರಿ ನಾಯಕ
(b) ಎರಡನೇ ಮದಕರಿ ನಾಯಕ
(c) ಮೂರನೇ ಮದಕರಿ ನಾಯಕ
(d) ಐದನೇ ಮದಕರಿ ನಾಯಕ

**51. ಭಾರತೀಯ ಸಶಸ್ತ್ರ ದಳದಲ್ಲಿ ಲೆಫ್ಟಿನೆಂಟ್ ಜನರಲ್ ಪದವಿ (Rank) ಪಡೆದ ಭಾರತದ ಮೊದಲ ದಂಪತಿ**

(a) ಅಂಜನಾ ಭದುರಿಯಾ ಮತ್ತು ಪಂಕಜ್ ಭದುರಿಯಾ
(b) ಮಿಥಾಲಿ ಮಧುಮಿತಾ ಮತ್ತು ರಾಜ್ ಶಂಕರ್
(c) ಪುನಿತಾ ಅರೋರಾ ಮತ್ತು ರಾಜೀವ್ ಅರೋರಾ
(d) ಮಾಧುರಿ ಕಾನಿಟ್ಕರ್ ಮತ್ತು ರಾಜೀವ್ ಕಾನಿಟ್ಕರ್

**52. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆಯು ಒಂದು ____**

(a) ಸಂವಿಧಾನಾತ್ಮಕ ಹಕ್ಕು
(b) ಮೂಲಭೂತ ಹಕ್ಕು
(c) ಮಾನವ ಹಕ್ಕು
(d) ಕಾನೂನುಬದ್ಧ ಹಕ್ಕು

**53. ಈ ಕೆಳಗಿನವುಗಳಲ್ಲಿ ಯಾವ ರೈಲ್ವೆ ವಲಯ ಮತ್ತು ಕೇಂದ್ರಕಾರ್ಯಸ್ಥಾನವು ಸರಿಯಾಗಿ ಹೊಂದಾಣಿಕೆಯಾಗುವುದಿಲ್ಲ?**

| | ರೈಲ್ವೆ ವಲಯ | | ಕೇಂದ್ರ ಕಾರ್ಯ ಸ್ಥಾನವು |
|---|---|---|---|
| (a) | ಪೂರ್ವತೀರ | – | ಭುವನೇಶ್ವರ |
| (b) | ಉತ್ತರ–ಮಧ್ಯ | – | ಅಲಹಾಬಾದ್ |
| (c) | ವಾಯುವ್ಯ | – | ಜೈಪುರ |
| (d) | ಆಗ್ನೇಯ–ಮಧ್ಯ | – | ರಾಯ್‌ಪುರ್ |

**54. "2019 ನೇ ಸಾಲಿನ ವಿಶ್ವ ಮಣ್ಣಿನ ದಿನದ" ಧ್ಯೇಯ ವಾಕ್ಯವೇನು?**

(a) ಮಣ್ಣಿನ ಸವಕಳಿ ತಡೆಯಿರಿ, ನಮ್ಮ ಭವಿಷ್ಯ ಕಾಪಾಡಿ
(b) ಮಣ್ಣುಗಳು ಮತ್ತು ಬೇಳೆಕಾಳುಗಳು, ಜೀವನಕ್ಕಾಗಿ ಒಂದು ಸಹಜೀವನ.
(c) ಮಣ್ಣಿನ ಮಾಲಿನ್ಯಕ್ಕೆ ಪರಿಹಾರವಾಗಿ
(d) ಗ್ರಹದ ಕಾಳಜಿ ನೆಲದಿಂದ ಮೊದಲಾಗಲಿ

**55. ಭಾರತದ ಭದ್ರತೆ (ಸೆಕ್ಯೂರಿಟಿ)ಗಳು ಮತ್ತು ವಿನಿಮಯ ಮಂಡಳಿ (ಸೆಬಿ)ಯು ಸ್ವಾಯತ್ತ ಸಂಸ್ಥೆಯಾದ ವರ್ಷ ________**

(a) 1988
(b) 1993
(c) 2001
(d) 1992

**56. 2016 ರಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಯು ಪಶ್ಚಿಮ ಬಂಗಾಳಕ್ಕೆ ಬೆಂಗಾಲಿ, ಇಂಗ್ಲೀಷ್ ಮತ್ತು ಹಿಂದಿ ಈ ಮೂರು ವಿವಿಧ ಭಾಷೆಗಳಲ್ಲಿ ಮೂರು ಹೊಸ ಹೆಸರುಗಳನ್ನು ಸೂಚಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಆದರೆ ಕೇಂದ್ರವು ಇದನ್ನು ತಿರಸ್ಕರಿಸಿತ್ತು. 2018 ರಲ್ಲಿ ವಿಧಾನ ಸಭೆಯು ಒಂದು ಹೊಸ ನಿರ್ಣಯವನ್ನು ಹೊರಡಿಸಿ ಈ ಮೂರು ಭಾಷೆಗಳಲ್ಲೂ ಬಳಸಬಹುದಾದ ಒಂದೇ ಹೆಸರನ್ನು ಸೂಚಿಸಿತು. ಹಾಗೆ ಸೂಚಿಸಿದ ಏಕಮಾತ್ರ ಹೆಸರು __________**

(a) ಬೆಂಗಾಳ್
(b) ಬಂಗಾಳ್
(c) ಬೆಂಗಾಳಿ
(d) ಬಾಂಗ್ಲಾ

**57. ಕೇಂದ್ರ ಲೋಕಸೇವಾ ಆಯೋಗವನ್ನು (ಯು.ಪಿ.ಎಸ್.ಸಿ) ಕುರಿತಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ?**

(a) ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಾವಧಿಯು 5 ವರ್ಷಗಳವರೆಗೆ ಇರುವುದು.
(b) ರಾಷ್ಟ್ರಪತಿಯು ಅಧ್ಯಕ್ಷರು ಅಥವಾ ಯಾವುದೇ ಇತರೆ ಸದಸ್ಯರನ್ನು ಅಧಿಕಾರದಿಂದ ತೆಗೆದು ಹಾಕಬಹುದು.
(c) ಅದು ಭಾರತದಲ್ಲಿ ಒಂದು ಕೇಂದ್ರಿಯ ನೇಮಕಾತಿ ಪ್ರಾಧಿಕಾರವಾಗಿದೆ.
(d) ಅದು ಒಂದು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದೆ.

**58. 2019 ರ 124 ನೇ ಸಂವಿಧಾನದ ತಿದ್ದುಪಡಿ ಮಸೂದೆಯು ______ ಸಂಬಂಧಿಸಿದೆ.**

(a) ರಾಷ್ಟ್ರೀಕೃತ ಬ್ಯಾಂಕುಗಳ ವಿಲೀನಕ್ಕೆ
(b) ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನದ ನಿರುಪಯುಕ್ತಗೊಳಿಸುವಿಕೆಗೆ
(c) ಸ್ವ–ಲಿಂಗಿ ವಿವಾಹಕ್ಕೆ
(d) ಸರ್ಕಾರಿ ಉದ್ಯೋಗಗಳು ಮತ್ತು ಶಿಕ್ಷಣದಲ್ಲಿ ಆರ್ಥಿಕವಾಗಿ ದುರ್ಬಲರಾದ ವರ್ಗಗಳ ಮೀಸಲಾತಿಗೆ

**59. ಈ ಕೆಳಗಿನವುಗಳಲ್ಲಿ ಯಾವುದು ಗರಿಷ್ಠ ಸಂಖ್ಯೆಯ ರಾಷ್ಟ್ರೀಯ ಉದ್ಯಾನಗಳನ್ನುಹೊಂದಿದೆ?**

(a) ಅಂಡಮಾನ್ ಮತ್ತು ನಿಕೋಬಾರ್
(b) ಅರುಣಾಚಲ ಪ್ರದೇಶ
(c) ಅಸ್ಸಾಂ
(d) ಮೇಘಾಲಯ

**60. ಪ್ರಧಾನಿ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಡಿ ಸಣ್ಣ ಮತ್ತು ಅಂಚಿನ ಕೃಷಿಕರಿಗಾಗಿ ಒದಗಿಸಲಾಗುವ ಹಣಕಾಸಿನ ಸಹಾಯವು ________**

(a) ವಾರ್ಷಿಕ ರೂ. 2,000/–
(b) ವಾರ್ಷಿಕ ರೂ. 4,000/–
(c) ವಾರ್ಷಿಕ ರೂ. 5,000/–
(d) ವಾರ್ಷಿಕ ರೂ. 6,000/–

**61. ವಿಜಯನಗರದ ಮತ್ತು ಬಹುಮನಿಗಳ ನಡುವಣ ಯುದ್ಧಗಳಿಗೆ ಮುಖ್ಯ ಕಾರಣ ಸ್ಥಳ ________**

(a) ಮಧುರೈ ರಾಜ್ಯ
(b) ಕೊಂಕಣ ಪ್ರದೇಶ
(c) ಗೋವಾ ಪ್ರದೇಶ
(d) ರಾಯಚೂರ ದೋಅಬ್ ಪ್ರದೇಶ

**62. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು 2020ನೇ ವರ್ಷವನ್ನು ______ ಎಂದು ಘೋಷಿಸಿದೆ.**

(a) ಇಂಟರ್‌ನ್ಯಾಷನಲ್ ಇಯರ್ ಆಫ್ ಪ್ಲಾಂಟ್ ಹೆಲ್ತ್ (IYPH)
(b) ಇಂಟರ್‌ನ್ಯಾಷನಲ್ ಇಯರ್ ಆಫ್ ಸಾಯ್ಲ್ ಹೆಲ್ತ (IYSH)
(c) ಇಂಟರ್‌ನ್ಯಾಷನಲ್ ಇಯರ್ ಆಫ್ ಅನಿಮಲ್ ಹೆಲ್ತ್ (IYAH)
(d) ಇಂಟರ್‌ನ್ಯಾಷನಲ್ ಇಯರ್ ಆಫ್ ಹ್ಯೂಮನ್ ಹೆಲ್ತ್ (IYHH)

**63. ಈ ಕೆಳಕಂಡ ದಕ್ಷಿಣ ಭಾರತದ ಯಾವ ನದಿಯು ತನ್ನ ಉಪನದಿಯೊಂದಿಗೆ ಸರಿಯಾಗಿ ಹೊಂದಾಣಿಕೆಯಾಗುವುದಿಲ್ಲ?**

| | ನದಿ | | ಉಪನದಿ |
|---|---|---|---|
| (a) | ಮಹಾನದಿ | – | ಸಿಯೋನಾಥ್ |
| (b) | ಗೋದಾವರಿ | – | ವರ್ಣಾ |
| (c) | ಕೃಷ್ಣಾ | – | ಭೀಮಾ |
| (d) | ಕಾವೇರಿ | – | ಸುವರ್ಣಾವತಿ |

**64. ಈ ಕೆಳಕಂಡ ಭಾರತದ ಯಾವ ಕೈಗಾರಿಕಾ ಪ್ರದೇಶವು ತನ್ನ ಕೈಗಾರಿಕಾ ಸ್ವರೂಪ ರಚನೆಯಲ್ಲಿ ಶೇಕಡಾವಾರು ಅತಿ ಹೆಚ್ಚು ಖನಿಜ ಆಧಾರಿತ ಕೈಗಾರಿಕೆಗಳನ್ನು ಹೊಂದಿದೆ?**

(a) ದೆಹಲಿ – ಘಾಜಿಯಾಬಾದ್ – ಮೀರತ್ ಪ್ರದೇಶ
(b) ಅಲಹಾಬಾದ್ – ವಡೋದರಾ ಪ್ರದೇಶ
(c) ಮಧುರೈ – ಬೆಂಗಳೂರು ಪ್ರದೇಶ
(d) ರಾಂಚಿ – ಚೈಬಾಸಾ ಪ್ರದೇಶ

**65. ಇತ್ತೀಚೆಗೆ ಉದ್ಘಾಟಿಸಲಾದ ಸಫರ್ (SAFAR) ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

**a.** **ಇದು ಅತ್ಯಂತ ಮುಂದುವರೆದ ವಾಯುವಿನ ಗುಣಮಟ್ಟ ಮತ್ತು ಹವಾಮಾನ ಮುನ್ಸೂಚನಾ ವ್ಯವಸ್ಥೆ.**

**b.** **ಇದನ್ನು ಸ್ವದೇಶದಲ್ಲೇ ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮಿಟಿಯೋರಾಲಜಿ ಸಂಸ್ಥೆ ಅಭಿವೃದ್ಧಿಪಡಿಸಿದೆ.**

**c.** **ಇದು ಸೂರ್ಯನ ಯು.ವಿ. – ಸೂಚ್ಯಾಂಕವನ್ನು ಅಳೆಯುವುದಿಲ್ಲ.**

**ಮೇಲಿನ ಹೇಳಿಕೆಗಳಲ್ಲಿ ಯಾವುದು/ ಯಾವುವು ಸರಿ?**
**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮಾತ್ರ
(b) ಎ ಮತ್ತು ಸಿ ಮಾತ್ರ
(c) ಎ ಮತ್ತು ಬಿ ಮಾತ್ರ
(d) ಎ, ಬಿ ಮತ್ತು ಸಿ

**66. ಎರಡು ದೇಶಗಳ ನಡುವಣ ವ್ಯಾಪಾರವು ಉಪಯುಕ್ತವಾಗಬೇಕಾದರೆ ಸರಕುಗಳ ವೆಚ್ಚ ಅನುಪಾತಗಳು ____**

(a) ತಗ್ಗುತ್ತಿರಬೇಕು
(b) ಅನಿರ್ಧಾರಿತ
(c) ಭಿನ್ನವಾಗಿರಬೇಕು
(d) ಸಮವಾಗಿರಬೇಕು.

**67. ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರ ಕೌಶಲ್ಯ ಮತ್ತು ಜ್ಞಾನಾಭಿವೃದ್ಧಿಯನ್ನು ಉತ್ತೇಜಿಸುವ ಸಲುವಾಗಿ ಪ್ರಧಾನಮಂತ್ರಿ ವಿನೂತನ ಕಲಿಕಾ ಕಾರ್ಯಕ್ರಮದ ಕೆಳಗೆ ಇಸ್ರೋದಿಂದ ಚಾಲನೆ ಮಾಡಲ್ಪಟ್ಟ ಕಾರ್ಯಕ್ರಮ ಯಾವುದು?**

(a) ನಿಷ್ಠಾ
(b) ಯುವಿಕಾ
(c) ಶಗುನ್
(d) ಧ್ರುವ್

**68. ಈ ಕೆಳಗಿನ ಹೇಳಿಕೆ/ ಗಳಲ್ಲಿ ಯಾವುದು/ ಯಾವುವು ಸರಿ?**

**a.** **2019–20 ರ ಅವಧಿಯಲ್ಲಿ ಒಬ್ಬ ಮಹಿಳಾ ಗಗನಯಾತ್ರಿ ಕ್ರಿಸ್ಟಿನಾ ಕಾಚ್ 328 ದಿನಗಳನ್ನು ಅಂತರಿಕ್ಷದಲ್ಲಿ ಕಳೆದು ದಾಖಲೆ ಮುರಿದರು.**

**b.** **ಕ್ರಿಸ್ಟಿನಾ ಕಾಚ್ ಅವರೊಂದಿಗೆ ಲ್ಯೂಕಾ ಪರ್ಮಿಟಾನೋ ಮತ್ತು ಅಲೆಕ್ಸಾಂಡರ್ ಸ್ಕೋವಾತ್ಸೊವ್ ಗಗನಯಾತ್ರಿಗಳಿದ್ದರು.**

**c.** **ಈ ನಿಯೋಗದ ಅವಧಿಯಲ್ಲಿ ಪಾರ್ಕಿನ್‌ಸನ್ ಮತ್ತು ಅಲ್ಜೈಮರ್ ಚಿಕಿತ್ಸೆಗೆ ಸಮರ್ಥವಾಗಿ ಉಪಯೋಗವಾಗುವ ಪ್ರೋಟಿನ್ ಹರಳುಗಳನ್ನು ಬೆಳೆಯುವ ಸಂಶೋಧನೆಯಾಯಿತು.**

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ ಮಾತ್ರ ಸರಿ
(b) ಎ ಮತ್ತು ಬಿ ಸರಿ
(c) ಬಿ ಮತ್ತು ಸಿ ಸರಿ
(d) ಎ, ಬಿ ಮತ್ತು ಸಿ ಸರಿ

**69. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?**

**a.** ಅದು 1599 ರಲ್ಲಿ ದಿ ಮರ್ಚೆಂಟ್ ಅಡ್ವೆಂಚರರ್ಸ್ ಎಂಬ ವರ್ತಕರ ಗುಂಪಿನಿಂದ ಪ್ರಾರಂಭವಾಯಿತು.

**b.** ಕ್ರಿ.ಶ. 1600ರ ಸನ್ನದಿನಲ್ಲಿ ರಾಣಿ ಎಲಿಜಬೆತ್ ಅದಕ್ಕೆ ಅನಿರ್ದಿಷ್ಟ ಅವಧಿಯವರೆಗೆ ಪೂರ್ವದೊಂದಿಗೆ ವ್ಯಾಪಾರ ನಡೆಸುವ ಏಕಸ್ವಾಮ್ಯವನ್ನು ಮಂಜೂರು ಮಾಡಿದಳು.

**c.** ಅದು 1608 ರಲ್ಲಿ ಸೂರತ್ತಿನಲ್ಲಿ ವ್ಯಾಪಾರಿ ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಿತು.

**d.** ಕಂಪನಿಯ ವ್ಯಾಪಾರದ ಏಕ ಸ್ವಾಮ್ಯವನ್ನು 1609 ರಲ್ಲಿ 1ನೇ ಜೇಮ್ಸ್‌ನು ರದ್ದು ಪಡಿಸಿದನು.

**ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:**

(a) ಎ ಮತ್ತು ಡಿ ಮಾತ್ರ
(b) ಎ, ಬಿ ಮತ್ತು ಡಿ ಮಾತ್ರ
(c) ಎ ಮತ್ತು ಸಿ ಮಾತ್ರ
(d) ಎ ಮತ್ತು ಬಿ ಮಾತ್ರ

**70. 2019ರ ಜನವರಿಯಲ್ಲಿ, ಪ್ರಥಮವಾಗಿ ಚಂದ್ರನ ದೂರದ ಮತ್ತೊಂದು ಬದಿಯ ಮೇಲಿಳಿದ ಚೀನೀಯರ ಬಾಹ್ಯಾಕಾಶ ನೌಕೆ____**

(a) ಚಾಂಗ್ ಇ 4 (Chang'e4)
(b) ಚಾಂಗ್ ಇ 3 (Chang'e 3)
(c) ಚಾಂಗ್ ಇ 2 (Chang'e 2)
(d) ಲಿಯಾಂಗ್ ಇ 01 (Liang'e 01)

**71. ಈ ಕೆಳಕಂಡವರಲ್ಲಿ 2019 ನೇ ಸಾಲಿನಲ್ಲಿ ಭಾರತ ರತ್ನ ಪ್ರಶಸ್ತಿ ಪಡೆದಿಲ್ಲದಿರುವವರು ಯಾರು?**

(a) ಪ್ರಣಬ್ ಮುಖರ್ಜಿ
(b) ಭುಪೆನ್ ಹಜಾರಿಕಾ
(c) ಅಟಲ್ ಬಿಹಾರಿ ವಾಜಪೇಯಿ
(d) ನಾನಾಜಿ ದೇಶ್‌ಮುಖ್

**72. 2018–19 ರ ವಿತ್ತೀಯ ವರ್ಷದಲ್ಲಿ ದೇಶದ ಒಟ್ಟು ತೈಲ ಅಗತ್ಯಗಳಲ್ಲಿ ಐದನೇ ಒಂದು (1/5) ಭಾಗಕ್ಕಿಂತಲೂ ಹೆಚ್ಚು ಕಚ್ಚಾ ತೈಲವನ್ನು ಭಾರತಕ್ಕೆ ಪೂರೈಸಿರುವ ದೇಶ ________**

(a) ಸೌದಿ ಅರೇಬಿಯಾ
(b) ಇರಾಕ್
(c) ಇರಾನ್
(d) ಅಫ್ಘಾನಿಸ್ಥಾನ್

**73. ಈ ಕೆಳಗಿನವರಲ್ಲಿ ಯಾರು ಪ್ರೊಟೆಸ್ಟಂಟ್ ಪಂಗಡಕ್ಕೆ ಸೇರಿದವರು?**

(a) ಬ್ರಿಟಿಷ್ ಮತ್ತು ಡಚ್ಚರು
(b) ಸ್ಪೇನಿಷ್ ಮತ್ತು ಪೋರ್ಚುಗೀಸರು
(c) ಪೋರ್ಚುಗೀಸರು
(d) ಫ್ರೆಂಚರು

**74. ಪ್ರತಿವರ್ಷ ________ ದಿನವನ್ನು "ವಿಶ್ವ ನಿಸರ್ಗ ಸಂರಕ್ಷಣಾ ದಿನ' ವನ್ನಾಗಿ ಆಚರಿಸಲಾಗುವುದು.**

(a) 28 ಜುಲೈ
(b) 08 ಜುಲೈ
(c) 05 ಜೂನ್
(d) 25 ಜೂನ್

**75. ದಕ್ಷ ವಿದೇಶಿ ವಿನಿಯಮ ದರ ಮಾರುಕಟ್ಟೆಯಲ್ಲಿ, ಗೃಹ ದೇಶೀಯ ಹಣ ಪೂರೈಕೆ ಬೆಳವಣಿಗೆಯಲ್ಲಿ ಆಗುವ ಅನಿರೀಕ್ಷಿತ ಹೆಚ್ಚಳವು ಇದಕ್ಕೆ ದಾರಿ ಮಾಡುವುದು.**

(a) ಒಂದು ಕರೆನ್ಸಿ (ಮುಖ ಬೆಲೆಯಲ್ಲಿ) ತತ್‌ಕ್ಷಣದ ಬೆಲೆ ಏರಿಕೆ
(b) ಒಂದು ಕರೆನ್ಸಿ (ಮುಖ ಬೆಲೆಯಲ್ಲಿ) ತತ್‌ಕ್ಷಣದ ಬೆಲೆ ಇಳಿಕೆ
(c) ನೇರ ವಿದೇಶಿ ಹೂಡಿಕೆಯಲ್ಲಿ ತತ್‌ಕ್ಷಣದ ಇಳಿಕೆ
(d) ಮೇಲಿನ ಯಾವುವೂ ಅಲ್ಲ.

**76. ಮೂಲಭೂತ ಹಕ್ಕುಗಳ ಸಿದ್ಧಾಂತವನ್ನು 368 ನೇ ಕಲಮಿನಡಿ ತಿದ್ದುಪಡಿ ಮಾಡಲಾಗದು ಎಂದು ಸರ್ವೋಚ್ಛ ನ್ಯಾಯಾಲಯ ಪ್ರತಿಪಾದಿಸಿದ್ದು ಈ ಮೊಕದ್ದಮೆಯಲ್ಲಿ**

(a) ಗೋಪಾಲನ್ v/s ಮದ್ರಾಸ್ ರಾಜ್ಯ
(b) ಕೇಶವಾನಂದ ಭಾರತಿ v/s ಕೇರಳ ರಾಜ್ಯ
(c) ಗೋಲಕ್‌ನಾಥ v/s ಪಂಜಾಬ್ ರಾಜ್ಯ
(d) ಮೇನಕಾ v/s ಭಾರತ ಒಕ್ಕೂಟ

**77. 'ಮೇಕ್ ಇನ್ ಇಂಡಿಯಾ' ಅಭಿಯಾನದಡಿಯಲ್ಲಿ ಲಘು ಯುದ್ಧ ಹೆಲಿಕಾಪ್ಟರ್‌ನ್ನು ಭಾರತದ ಈ ಕೆಳಕಂಡ ಯಾವ ಸ್ಥಳದಲ್ಲಿ ತಯಾರಿಸಲಾಗುತ್ತದೆ?**

(a) ಗುರುಗ್ರಾಮ್
(b) ವೈಜಾಗ್
(c) ಕೊಚ್ಚಿನ್
(d) ಬೆಂಗಳೂರು

**78. ________ ಹೊರಹೊಮ್ಮುವಿಕೆ ಮತ್ತು ಮುಳುಗಡೆ ಎರಡೂ ಲಕ್ಷಣಗಳನ್ನು ಪ್ರತಿನಿಧಿಸುತ್ತವೆ.**

(a) ಸಂಯುಕ್ತ ಸಮುದ್ರ ತೀರಗಳು
(b) ತಟಸ್ಥ ಸಮುದ್ರ ತೀರಗಳು
(c) ಸರಳ ಸಮುದ್ರ ತೀರಗಳು
(d) ಹಿಂಚಲನಾ ಸಮುದ್ರ ತೀರಗಳು

**79. 1765ರ ಅಲಹಾಬಾದ್ ಒಪ್ಪಂದದಿಂದ ಈಸ್ಟ್ ಇಂಡಿಯಾ ಕಂಪನಿಯು ಪಡೆದುಕೊಂಡದ್ದು ________**

(a) ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ದಿವಾನಿ ಹಕ್ಕುಗಳು
(b) ಕೋರಮಂಡಲ ತೀರದ ಮೇಲಣ ವ್ಯಾಪಾರ ಮಾಡುವ ಹಕ್ಕುಗಳು
(c) ದೆಹಲಿ ರಾಜಕೀಯದಲ್ಲಿ ಮಧ್ಯ ಪ್ರವೇಶಿಸುವ ಹಕ್ಕು
(d) ಹೂಗ್ಲಿಯಲ್ಲಿ ಕೋಟೆಯೊಂದನ್ನು ಕಟ್ಟಿಕೊಳ್ಳಲು ಬಂಗಾಳದ ನವಾಬನಿಂದ ಒಪ್ಪಿಗೆ.

**80. ________ ರಂದು ಯುನೈಟೆಡ್ ಕಿಂಗ್ಡಮ್ ಯೂರೋಪಿಯನ್ ಒಕ್ಕೂಟವನ್ನು ತೊರೆಯಿತು ಮತ್ತು 11ನೇ ತಿಂಗಳ ಸಂಕ್ರಮಣ ಅವಧಿಯನ್ನು ಪ್ರವೇಶಿಸಿತು.**

(a) 1ನೇ ಜನವರಿ, 2018
(b) 1ನೇ ಜನವರಿ, 2019
(c) 1ನೇ ಜನವರಿ, 2020
(d) 31ನೇ ಜನವರಿ, 2020

ICS DWD

**81. ಭಾರತದ ರಾಷ್ಟ್ರಪತಿಗಳಿಂದ ಜಿ.ಎಸ್.ಟಿ. (ಸರಕು ಮತ್ತು ಸೇವಾ ತೆರಿಗೆ) ಪರಿಷತ್ತು ರಚನೆಗಾಗಿ ಸಂವಿಧಾನಕ್ಕೆ ಅವಕಾಶವನ್ನು ಈ ಕೆಳಗಿನ ಯಾವ ಅನುಚ್ಛೇದವು ಒದಗಿಸಿತು?**

(a) ಅನುಚ್ಛೇದ 246 A

(b) ಅನುಚ್ಛೇದ 269 A

(c) ಅನುಚ್ಛೇದ 279 A

(d) ಅನುಚ್ಛೇದ 268 A

**82. ಅಂತರವಲಯ ಮಣ್ಣು/ಗಳು _________**

(a) ಜೌಗು ಮಣ್ಣು (Bog Soil)

(b) ಜಂಬು ಮಣ್ಣು (Laterite Soil)

(c) ಹುಲ್ಲುಗಾವಲು ಮಣ್ಣು (Meadow Soil)

(d) ಲವಣಯುಕ್ತ ಮಣ್ಣು (Saline Soil)

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(1) ಎ ಮಾತ್ರ

(2) ಬಿ ಮತ್ತು ಸಿ ಮಾತ್ರ

(3) ಎ, ಸಿ ಮತ್ತು ಡಿ

(4) ಎ ಮತ್ತು ಸಿ ಮಾತ್ರ

**83. 2019ರ ಜುಲೈನಲ್ಲಿ ಮುಖ್ಯ ಹಣಕಾಸು ಅಧಿಕಾರಿ ಮತ್ತು ವಿಶ್ವ ಬ್ಯಾಂಕ್ ಗುಂಪಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡ ಭಾರತೀಯ ಮಹಿಳಾ ಅರ್ಥಶಾಸ್ತ್ರಜ್ಞರು ಈ ಕೆಳಕಂಡವರಲ್ಲಿ ಯಾರು?**

(a) ಅಂಶುಲಾ ಕಾಂತ್

(b) ಗೀತಾ ಗೋಪಿನಾಥ

(c) ಶೃತಿ ಕಪೂರ್

(d) ನಿರ್ಮಲಾ ಸೀತಾರಾಮನ್

**84. ಕಾಫಿ ಬೆಳೆಯು ________ ಅವಧಿಯಲ್ಲಿ ಪ್ರೋತ್ಸಾಹಿಸಲ್ಪಟ್ಟಿತ್ತು.**

(a) ಬೌರಿಂಗ್‌ನ

(b) ಹೈದರನ

(c) ಟಿಪ್ಪುವಿನ

(d) ಕಬ್ಬನ್‌ನ

**85. ವಿಶ್ವ ಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ (ಸಿ.ಒ.ಪಿ.21) ಭಾರತ ಯಾವ ದೇಶದ ಜೊತೆ ಜಂಟಿಯಾಗಿ ಅಂತರಾಷ್ಟ್ರೀಯ ಸೌರ ಒಕ್ಕೂಟವನ್ನು ಪ್ರಾರಂಭಿಸಿತು.**

(a) ಯುನೈಟೆಡ್ ಕಿಂಗ್‌ಡಂ

(b) ಫ್ರಾನ್ಸ್

(c) ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ

(d) ಜರ್ಮನಿ

**86. ಈ ಕಳಗಿನ ಯಾವ ನಗರವನ್ನು ಯುನೆಸ್ಕೋ 2020ರ ವಿಶ್ವ ಕ್ಯಾಪಿಟಲ್ ಆಫ್ ಆರ್ಕಿಟೆಕ್ಚರ್ ಎಂದು ಹೆಸರಿಸಿದೆ.**

(a) ಜೋಹಾನ್ಸ್‌ಬರ್ಗ್

(b) ರಿಯೊ–ಡಿ–ಜನೇರೊ

(c) ಪ್ಯಾರಿಸ್

(d) ಲಂಡನ್

**87. "ಮಂತ್ರಿಮಂಡಲದಲ್ಲಿ ಪ್ರಧಾನಮಂತ್ರಿಗಳೂ ಸೇರಿದಂತೆ ಸಚಿವರುಗಳ ಒಟ್ಟು ಸಂಖ್ಯೆಯು, ಲೋಕಸಭೆಯಲ್ಲಿರುವ ಸದಸ್ಯರುಗಳ ಒಟ್ಟು ಸಂಖ್ಯೆಯ ಶೇ. 15 ಕ್ಕಿಂತ ಹೆಚ್ಚಿರಬಾರದು" ಈ ಹೇಳಿಕೆಗೆ ಸಂಬಂಧಿಸಿದ ಸರಿಯಾದ ಉತ್ತರವನ್ನು ಸೂಚಿಸಿ.**

(a) ಇದನ್ನು 2003 ರ 91ನೇ ಸಂವಿಧಾನಾತ್ಮಕ ತಿದ್ದುಪಡಿ ಅಧಿನಿಯಮದ ಮೇರೆಗೆ ಖಂಡ (1ಎ) ಮೂಲಕ ಭಾರತ ಸಂವಿದಾನದ ಅನುಚ್ಛೇದ 75ಕ್ಕೆ ಸೇರಿಸಲಾಗಿದೆ.

(b) ಇದನ್ನು 2000ದ 83 ನೇ ಸಂವಿಧಾನಾತ್ಮಕ ತಿದ್ದುಪಡಿ ಅಧಿನಿಯಮದ ಮೇರೆಗೆ ಖಂಡ (3ಸಿ) ಮೂಲಕ ಭಾರತ ಸಂವಿಧಾನದ ಅನುಚ್ಛೇದ 57 ರಲ್ಲಿ ಸೇರಿಸಲಾಗಿದೆ.

(c) ಇದನ್ನು 2005ರ 93 ನೇ ಸಂವಿಧಾನಾತ್ಮಕ ತಿದ್ದುಪಡಿ ಅಧಿನಿಯಮದ ಮೇರೆಗೆ ಖಂಡ (2ಡಿ) ಮೂಲಕ ಭಾರತ ಸಂವಿಧಾನದ ಅನುಚ್ಛೇದ 61ರಲ್ಲಿ ಸೇರಿಸಲಾಗಿದೆ

(d) ಇದನ್ನು 1976ರ 42ನೇ ಸಂವಿಧಾನಾತ್ಮಕ ತಿದ್ದುಪಡಿ ಅಧಿನಿಯಮದ ಮೇರೆಗೆ ಖಂಡ (1ಬಿ) ಮೂಲಕ ಭಾರತ ಸಂವಿಧಾನದ ಅನುಚ್ಛೇದ 83 ರಲ್ಲಿ ಸೇರಿಸಲಾಗಿದೆ.

**88. Indian MOOC (Massive Open Online Courses) ಉಪಕ್ರಮವು _____ ಎಂದು ಗುರುತಿಸಲ್ಪಟ್ಟಿದೆ.**

(a) ಭೂಮಿ

(b) ಕಿಯೋಸ್ಕ್

(c) ಸ್ಪಾರ್ಕ್

(d) ಸ್ವಯಂ

**89. ಸಂಸತ್ತಿನ ಸದಸ್ಯರುಗಳ ಹಕ್ಕುಗಳನ್ನು ಹಾಗೂ ವಿಶೇಷ ವಿನಾಯತಿ (ಉನ್ಮುಕ್ತಿ)ಗಳನ್ನು ಉಲ್ಲಂಘಿಸುವುದು ಮತ್ತು ಅವರಿಗೆ ಅಗೌರವ ಸಲ್ಲಿಸುವುದು ಸಂಸತ್ತಿನ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾಗಿದೆ. ಈ ಪ್ರಕರಣದಲ್ಲಿ ಯಾವ ಪ್ರಸ್ತಾವವನ್ನು ಮಂಡಿಸಿದೆ ಹಾಗೂ ಯಾವ ನಿಯಮದ ಮೇರೆಗೆ ಮಂಡಿಸಿದೆ.**

(a) ಲೋಕಸಭಾ ನಿಯಮ ಪುಸ್ತಕದ ಅಧ್ಯಾಯ XIII ರಲ್ಲಿ ಚರ್ಚಾನಿರೋಧ ನಿರ್ಣಯ, ನಿಯಮ ಸಂಖ್ಯೆ 167 ಮತ್ತು ರಾಜ್ಯಸಭಾ ನಿಯಮ ಪುಸ್ತಕದ ಅಧ್ಯಾಯ XIV ರಲ್ಲಿ ನಿಯಮ 129.

(b) ಲೋಕಸಭಾ ನಿಯಮ ಪುಸ್ತಕದ ಅಧ್ಯಾಯ XX ರಲ್ಲಿ ವಿಶೇಷ ಹಕ್ಕಿನ ನಿರ್ಣಯ, ನಿಯಮ ಸಂಖ್ಯೆ 222 ಹಾಗೂ ರಾಜ್ಯಸಭಾ ನಿಯಮ ಪುಸ್ತಕದ ಅಧ್ಯಾಯ XVI ರಲ್ಲಿ ನಿಯಮ 187.

(c) ಲೋಕಸಭಾ ನಿಯಮ ಪುಸ್ತಕದ ಅಧ್ಯಾಯ VIII ರಲ್ಲಿ ವಾಗ್ದಂಡನೆ ಮತ್ತು ಖೋತಾ ನಿರ್ಣಯ ನಿಯಮ ಸಂ. 38 ಹಾಗೂ ರಾಜ್ಯಸಭಾ ನಿಯಮ ಪುಸ್ತಕದ ಅಧ್ಯಾಯ VII ರಲ್ಲಿ ನಿಯಮ 27.

(d) ಲೋಕಸಭಾ ನಿಯಮ ಪುಸ್ತಕದ ಅಧ್ಯಾಯ IX ರಲ್ಲಿ ಗಮನಸೆಳೆವ ನಿರ್ಣಯ, ನಿಯಮ ಸಂ. 109 ಹಾಗೂ ರಾಜ್ಯಸಭಾ ನಿಯಮ ಪುಸ್ತಕದ ಅಧ್ಯಾಯ XV ರಲ್ಲಿ ನಿಯಮ 93

**90. ಚೋಳರ ಕಂಚಿನ ಮೂರ್ತಿಗಳು ಉತ್ಕೃಷ್ಟ ಕೌಶಲ್ಯಕ್ಕೆ ಹೆಸರಾಗಿವೆ. ಈ ಲೋಹದ ಮೂರ್ತಿಗಳನ್ನು ಎಷ್ಟು ಲೋಹಗಳ ಮಿಶ್ರಣದಿಂದ ಮಾಡಲಾಗಿದೆ?**

(a) ನಾಲ್ಕು
(b) ಐದು
(c) ಆರು
(d) ಎಂಟು

**91. "ಒಂದು ಬೆಲ್ಟ್ ಒಂದು ರಸ್ತೆ" ಉಪಕ್ರಮವನ್ನು ಕುರಿತಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಯು ಸರಿಯಾಗಿದೆ?**

(a) "ಬೆಲ್ಟ್" ಎಂಬುದು ಹಿಮಾಲಯದ "ಬೆಲ್ಟ್" ಕುರಿತಾಗಿದೆ ಮತ್ತು "ರಸ್ತೆ" ಎಂಬುದು ಭೂ ಮಾರ್ಗಗಳನ್ನು ಕುರಿತಾಗಿದೆ. ಏಷ್ಯಾ, ಆಫ್ರಿಕಾ ಮತ್ತು ಅಂಟಾರ್ಟಿಕಾಗಳ ನಡುವೆ ಸಂಪರ್ಕ ಕಲ್ಪಿಸುವಿಕೆಯನ್ನು ಸುಧಾರಿಸುವ ಗುರಿಯನ್ನುಳ್ಳ ಉಪಕ್ರಮವಾಗಿದೆ.
(b) "ಬೆಲ್ಟ್" ಎಂಬುದು ಕಡಲತಡಿಯ ರಸ್ತೆಗಳು ಮತ್ತು "ರಸ್ತೆ" ಎಂಬುದು ವಾಯು ಮತ್ತು ಭೂ ಮಾರ್ಗಗಳನ್ನು ಸೂಚಿಸುತ್ತದೆ. ಚೈನಾ, ಪಾಕಿಸ್ತಾನ, ಭಾರತ ಮತ್ತು ಇತರ ಏಷ್ಯನ್ ರಾಷ್ಟ್ರಗಳ ನಡುವೆ ಸಂಪರ್ಕ ಕಲ್ಪಿಸುವಿಕೆಯನ್ನು ಸುಧಾರಿಸುವ ಗುರಿಯನ್ನುಳ್ಳ ಉಪಕ್ರಮವಾಗಿದೆ.
(c) "ಬೆಲ್ಟ್" ಎಂಬುದು ಓವರ್‌ಲ್ಯಾಂಡ್ (ಭೂ ಮಾರ್ಗವಾಗಿ ಬಹು ದೂರ ಪ್ರಯಾಣ) ಮಾರ್ಗಗಳನ್ನು ಕುರಿತದ್ದಾಗಿದೆ ಮತ್ತು "ರಸ್ತೆ" ಎಂಬುದು ಸಮುದ್ರ ಮಾರ್ಗಗಳನ್ನು ಕುರಿತದ್ದಾಗಿದೆ. ಏಷ್ಯಾ, ಆಫ್ರಿಕಾ ಮತ್ತು ಯುರೋಪ್‌ಗಳ ನಡುವೆ ಸಂಪರ್ಕ ಕಲ್ಪಿಸುವಿಕೆಯನ್ನು ಸುಧಾರಿಸುವ ಗುರಿಯನ್ನುಳ್ಳ ಉಪಕ್ರಮವಾಗಿದೆ.
(d) "ಬೆಲ್ಟ್" ಎಂಬುದು ಅರೇಬಿಯನ್ ಬೆಲ್ಟಿಗೆ ಸಂಬಂಧಿಸಿದ್ದಾಗಿದೆ ಮತ್ತು "ರಸ್ತೆ" ಎಂಬುದು ಭೂಮಾರ್ಗಗಳನ್ನು ಕುರಿತದ್ದಾಗಿದೆ. ಏಷ್ಯಾ, ಆಫ್ರಿಕಾ, ಆಸ್ಟ್ರೇಲಿಯಾ, ಹಿಂದೂ ಮಹಾಸಾಗರ ಮತ್ತು ಅರೇಬಿಯನ್ ಸಮುದ್ರಗಳ ನಡುವೆ ಸಂಪರ್ಕ ಕಲ್ಪಿಸುವಿಕೆಯನ್ನು ಸುಧಾರಿಸುವ ಗುರಿಯನ್ನುಳ್ಳ ಉಪಕ್ರಮವಾಗಿದೆ.

**92. ಲಡಾಖ್‌ನ ಯಾವ ಹೆಪ್ಪುಗಟ್ಟಿದ ನದಿಯು ಮೂಲತಃ 'ಚಾದರ್ ಟ್ರೆಕ್' ಗಾಗಿ ಪ್ರತಿವರ್ಷ ಸಾಹಸಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.**

(a) ಶ್ಯೋಕ್ ನದಿ
(b) ನಬ್ರಾ ನದಿ
(c) ಝುಂಸ್ಕಾರ್ ನದಿ
(d) ಗಾಲ್ವಾನ ನದಿ

**93. 'ವೈಟ್ ಹೆಲ್ಮೆಟ್' ಎಂಬುದು ______**

(a) ಸಿರಿಯನ್ ವಾಯು ದಾಳಿಯಲ್ಲಿ ಗಾಯಗೊಂಡವರನ್ನು ಉಳಿಸಲು ರೂಪಿತವಾದ 'ಸಿರಿಯಾ ಸಿವಿಲ್ ಡಿಫೆನ್ಸ್' ಎಂದು ಕರೆಯಲಾದ ಒಂದು ಸ್ವಯಂ ಸೇವಕರ ಸಂಘಟನೆ
(b) ಜನರಲ್ ಖಾಸೆಮ್ ಸೂಲೈಮನಿ ನೇತೃತ್ವದ ಇರಾನೀ ಇಸ್ಲಾಮೀ ಕ್ರಾಂತಿಕಾರಿಗಳ ದಳದ ವಿರುದ್ಧ ಹರತಾಳಕ್ಕಾಗಿ ರೂಪಿತವಾದ 'ಯು.ಎಸ್. ಏಂಜಲ್ಸ್ ಸ್ಕ್ವಾಡ್' ಎಂದು ಕರೆಯಲಾದ ಅಮೇರಿಕಾದ ಮಿಲಿಟರಿ ತುಕಡಿ
(c) 2011 ರ ಸುನಾಮಿಯ ಸಂದರ್ಭದಲ್ಲಿ ಫುಕುಶಿಮಾ ನ್ಯೂಕ್ಲಿಯರ್ ವಿಪತ್ತಿನ ಬಗ್ಗೆ ಅಧ್ಯಯನಕ್ಕಾಗಿ ಸ್ಥಾಪಿತವಾದ 'ನ್ಯೂಕ್ಲಿಯರ್ ಡಿಫೆನ್ಸ್ ಮತ್ತು ಸರ್ವೇಲೆನ್ಸ್ ಸ್ಕ್ವಾಡ್' ಎಂದು ಕರೆಯಲ್ಪಟ್ಟ ಜಪಾನೀ ವಿಜ್ಞಾನಿಗಳ ಗುಂಪು.
(d) ವರ್ಣಬೇಧ ಮತ್ತು ಪ್ರತ್ಯೇಕತಾ ನೀತಿಯ ವಿರುದ್ಧವಾಗಿ ಹೋರಾಡಲು ಸ್ಥಾಪಿತವಾದ 'ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಗಾರ್ಡ್' ಎಂದು ಕರೆಯಲಾದ ಆಫ್ರಿಕನ್ ಸ್ವಯಂ ಸೇವಕರ ಸಂಘಟನೆ.

**94. ಭಾರತ ಸಂವಿಧಾನದ ಅನುಚ್ಛೇದ 236(ಎ) ರ ಅನುಸಾರವಾಗಿ "ಜಿಲ್ಲಾ ನ್ಯಾಯಾಧೀಶ" ಎಂಬ ಪದಾವಳಿಯು ಒಳಗೊಂಡಿರುವುದು ______**

(a) ನಗರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ, ಅಡಿಷನಲ್ (ಹೆಚ್ಚುವರಿ) ಜಿಲ್ಲಾ ನ್ಯಾಯಾಧೀಶ, ಜಂಟಿ ಜಿಲ್ಲಾ ನ್ಯಾಯಾಧೀಶ, ಸಹಾಯಕ ಜಿಲ್ಲಾ ನ್ಯಾಯಾಧೀಶ
(b) ಲಘು ವಿವಾದ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ
(c) ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಹೆಚ್ಚುವರಿ ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್
(d) ಸೆಶನ್ಸ್ ನ್ಯಾಯಾಧೀಶ, ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶ, ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶ ಮತ್ತು ಸಹಾಯಕ ಸೆಶನ್ಸ್ ನ್ಯಾಯಾಧೀಶ

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

(a) ಎ, ಸಿ ಮತ್ತು ಡಿ
(b) ಎ, ಬಿ ಮತ್ತು ಡಿ
(c) ಬಿ ಮತ್ತು ಸಿ ಮಾತ್ರ
(d) ಈ ಮೇಲಿನವುಗಳೆಲ್ಲವೂ

**95. ಏಷ್ಯಾದಲ್ಲೇ ಮೊದಲ ಬ್ಲೂ ಫ್ಲಾಗ್ ಮಾನ್ಯತೆ ಪಡೆದ ಭಾರತದ ಸಮುದ್ರ ತೀರ (Beach) ಯಾವುದು?**

(a) ಚಂದ್ರಭಾಗ ಸಮುದ್ರ ತೀರ
(b) ಮರೀನಾ ಸಮುದ್ರ ತೀರ
(c) ಗೋಪಾಲಪುರ ಸಮುದ್ರ ತೀರ
(d) ಗೋಕರ್ಣ ಸಮುದ್ರ ತೀರ

**96. ಒಂದು ಸಮುದಾಯದಲ್ಲಿನ ಬಡತನ ವ್ಯಾಪ್ತಿಯ ಮೇಲೆ ಒಟ್ಟು ತೀರ್ಮಾನಕ್ಕೆ ಬರಲು ಜೀವನದ ಗುಣಮಟ್ಟದಲ್ಲಿರುವ ಅಭಾವದ ವಿವಿಧ ವೈಶಿಷ್ಟ್ಯಗಳೊಂದಿಗಿನ ಸೂಚ್ಯಂಕವನ್ನು ________ ಎಂದು ಕರೆಯಲಾಗುತ್ತದೆ.**

(a) ಮಾನವ ಅಭಿವೃದ್ಧಿ ಸೂಚ್ಯಂಕ
(b) ಮಾನವ ಬಡತನ ಸೂಚ್ಯಂಕ
(c) ಮಾನವ ಸ್ವಾತಂತ್ರ್ಯ ಸೂಚ್ಯಂಕ
(d) ಮಾನವ ಅಭಾವ ಸೂಚ್ಯಂಕ

**97. ಪಟ್ಟಿ–1 ಮತ್ತು ಪಟ್ಟಿ–2 ಗಳನ್ನು ಹೊಂದಿಸಿ:**

| | ಪಟ್ಟಿ–1 | | ಪಟ್ಟಿ–2 |
|---|---|---|---|
| (a) | ರಜನಿ ಕೊಥಾರಿ | 1) | ಪಬ್ಲಿಕ್ ಅಡ್ಮಿನಿಸ್ಟ್ರೇಷನ್ |
| (b) | ಸಿ.ಪಿ. ಬಾಂಬ್ರಿ | 2) | ಕ್ಯಾಸ್ಟ್ ಅಂಡ್ ಪೊಲಿಟಿಕ್ಸ್ ಇನ್ ಇಂಡಿಯಾ |
| (c) | ಮೋಹಿತ್ ಭಟ್ಟಾಚಾರ್ಯ | 3) | ವರ್ಕಿಂಗ್ ಆಫ್ ಎ ಡೆಮೊಕ್ರ್ಯಾಟಿಕ್ ಕಾನ್ಸ್ಟಿಟ್ಯೂಷನ್ ಇಂಡಿಯನ್ ಎಕ್ಸ್ಪೀರಿಯನ್ಸ್ |
| (d) | ಗ್ರಾನ್‌ವಿಲ್ಲೆ ಆಸ್ಟಿನ್ | 4) | ದಿ ಇಂಡಿಯನ್ ಸ್ಟೇಟ್ |

**ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ:**

| | A | B | C | D |
|---|---|---|---|---|
| (a) | 2 | 4 | 1 | 3 |
| (b) | 3 | 2 | 1 | 4 |
| (c) | 1 | 2 | 3 | 4 |
| (d) | 4 | 1 | 2 | 3 |

**98. ಸ್ವಾತಂತ್ರ್ಯ ಚಳುವಳಿಯ ಅವಧಿಯಲ್ಲಿ 'ಅಖಿಲ–ಕರ್ನಾಟಕ ಸತ್ಯಾಗ್ರಹ ದಿನ' ಎಂದು ಯಾವ ದಿನವನ್ನು ಆಚರಿಸಲಾಗಿತ್ತು?**

(a) ಡಿಸೆಂಬರ್, 12
(b) ಜನೇವರಿ, 12
(c) ಜುಲೈ, 12
(d) ಸೆಪ್ಟೆಂಬರ್, 12

**99. ಅಂತರಾಷ್ಟ್ರೀಯ ವ್ಯಾಪಾರಗಳಲ್ಲಿ ಆಗಿಂದಾಗ್ಗೆ ಬಳಕೆಯಾಗುವ ಸಂದಾಯ/ ಪಾವತಿ ವಿಧಾನವು ಅಂತರಾಷ್ಟ್ರೀಯವಾಗಿ ಮಾರಾಟವಾದ ರಫ್ತುದಾರರ ಉತ್ತಮ ಉತ್ಪನ್ನಗಳಿಗೆ ಖಾತ್ರಿಯಾದದ್ದು ______**

(a) ಮುಕ್ತ ಲೆಕ್ಕ ಖಾತೆ
(b) ಡ್ರಾಫ್ಟ್‌ಗಳು
(c) ಬಿಲ್ ಆಫ್ ಲೇಡಿಂಗ್ (ವಹನ ಪತ್ರ)
(d) ಲೆಟರ್ ಆಫ್ ಕ್ರೆಡಿಟ್ (ನಿರ್ವಹಣ ಪತ್ರ)

**100. ಇತ್ತೀಚಿನ ವರ್ಷಗಳಲ್ಲಿ, ಆಂಧ್ರಪ್ರದೇಶದ ಕೃಷ್ಣಾ ಮತ್ತು ಗೋದಾವರಿ ನದಿಗಳ ಮುಖಜ ಭೂಮಿಯಲ್ಲಿ ಕಡಲ ಪ್ರದೇಶಗಳಲ್ಲಿ ಕಚ್ಚಾ ತೈಲ ಉತ್ಪಾದನೆಯನು ಯೋಜಿಸಲಾಗಿದೆ. ಈ ಪ್ರಾಂತ್ಯದ ಶಿಲಾಸ್ತರವನ್ನು ________ ಎಂದು ಕರೆಯಲಾಗುತ್ತದೆ.**

(a) ಲಾಕೋಲಿಥ್ ರಚನೆ
(b) ಬಾಥೋಲಿತ್ ರಚನೆ
(c) ರಾವ್ವಾ ರಚನೆ
(d) ಸಿಂಕ್ಲೈನ್ ರಚನೆ

ICS DWD